# ಮಹಾಭಾರತದಲ್ಲಿ ಅರ್ಥನೀತಿ

ಸಂಸ್ಕೃತ ಭಾಷಾ ಪಠ್ಯ – ಪೀಠಿಕೆ, ಅನುವಾದ ಟಿಪ್ಪಣಿಗಳೊಂದಿಗೆ

(ಬಿ.ಬಿ.ಎ./ಎಂ.ಟಿ.ಎಸ್/ಎಂಬಿಎಸ್/ಮೂರನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗಾಗಿ)

ಸಂಪಾದಕರು:

**ಡಾ|| ಎಂ. ಪದ್ಮನಾಭ ಮರಾಠೆ**

ನಿರ್ದೇಶಕರು, ಶ್ರೀದುರ್ಗಾ ಸ್ನಾತಕೋತ್ತರ ಸಂಸ್ಕೃತ ಮತ್ತು ಸಂಶೋಧನಾ ಕೇಂದ್ರ,

ಕಟೀಲು, ದಕ್ಷಿಣ ಕನ್ನಡ

**ಡಾ|| ರಾಮರಾವ್ .ಎಸ್**

ಮುಖ್ಯಸ್ಥರು

ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜು, ಯಲಹಂಕ, ಬೆಂಗಳೂರು – 64

# ARTHANEETI IN MAHABHARATHA

With Sanskrit text, translation and notes

(For III Semester BBA/MTS/MBS students)

Edited by

**Dr. M. Padmanabha Marathe,**

Director, Sri Durga Sanskrit Research and Study Centre,

Katilu, Dakshina Kannada

**Dr. Ramara Rao .S**

H.O.D. of Sanskrit,

Sheshadripuram First Grade College.

Yelahanka, Bangalore – 560 064

Pages:

Price:

Printed at : Prasaranga, Bengaluru City University, Bengaluru - 560001

# ಮುನ್ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯವು 2020–21ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಬಿಬಿಎ/ಎಂಬಿಟಿಎಸ್/ಎಂಬಿಎಸ್ ಪದವಿ ತರಗತಿಗಳ ಮೂರನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ **'ಮಹಾಭಾರತದಲ್ಲಿ ಅರ್ಥನೀತಿ'** ಎಂಬ ವಿಷಯವನ್ನು ಪಠ್ಯವನ್ನಾಗಿ ನಿಗದಿಪಡಿಸಿದೆ. ಪ್ರಾಚೀನ ಮಹರ್ಷಿಗಳಲ್ಲಿ ಒಬ್ಬರಾದ ಶ್ರೀ ವೇದವ್ಯಾಸರು ಮಹಾಭಾರತವೆಂಬ ಪ್ರಸಿದ್ಧ ಐತಿಹಾಸಿಕ ಶಾಸ್ತ್ರ ಹಾಗೂ ಕಾವ್ಯಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಬಹುತೇಕ ಎಲ್ಲ ವಿಷಯಗಳನ್ನು ಕುರಿತು ಸಮಗ್ರವಾಗಿ ವಿವೇಚಿಸಲಾಗಿದೆ.

ಪ್ರಾಚೀನ ಭಾರತೀಯರ ಅರ್ಥವ್ಯವಸ್ಥೆಯ ಪರಿಚಯವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವಲ್ಲಿ ಈ ಪಠ್ಯಪುಸ್ತಕವು ನೆರವಾಗಲಿದೆ ಎಂಬ ಆಶಯದಿಂದ ಇದರ ಪ್ರಕಟಣೆಯನ್ನು ಮಾಡುತ್ತಿದ್ದೇವೆ. ಅರ್ಥನೀತಿಯನ್ನು ಕುರಿತು ವೇದವ್ಯಾಸರ ಮಹಾಬಾರತದಲ್ಲಿನ ವಿಚಾರಗಳನ್ನು ಅಧ್ಯಾಪಕ ಹಾಗೂ ವಿದ್ಯಾರ್ಥಿವೃಂದಕ್ಕೆ ಅನುಕೂಲವಾಗುವ ರೀತಿಯಲ್ಲಿ ಮೂಲಪಠ್ಯ, ಪೀಠಿಕೆ, ಕನ್ನಡ ಹಾಗೂ ಆಂಗ್ಲ ಅನುವಾದ, ಟಿಪ್ಪಣಿಗಳ ಸಹಿತ ಡಾ॥ ಪದ್ಮನಾಭ ಮರಾಠೆ ಹಾಗೂ ಡಾ॥ ರಾಮರಾವ್. ಎಸ್ ಅವರು ಸಂಪಾದಿಸಿ ಒದಗಿಸಿಕೊಟ್ಟಿದ್ದಾರೆ. ಇವರಿಬ್ಬರಿಗೂ ನನ್ನ ಅಭಿನಂದನೆಗಳು ಹಾಗೂ ಧನ್ಯವಾದಗಳು. ಸಂಸ್ಕೃತ ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ॥ ಪಂಕಜನಯನ ಅವರಿಗೆ ನನ್ನ ಹಾರ್ದಿಕ ವಂದನೆಗಳು. ಈ ಪುಸ್ತಕವನ್ನು ಪ್ರಕಟಿಸಲು ಶ್ರಮವಹಿಸಿದ ಪ್ರಸಾರಾಂಗದ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರಿಗೆ ವಂದನೆಗಳು. ಸಂಸ್ಕೃತ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಇದರ ಪ್ರಯೋಜನ ಪಡೆಯುವರೆಂದು ಆಶಿಸುತ್ತೇನೆ.

ಪ್ರೊ. ಎಸ್. ಜಾಫೆಟ್
ಉಪಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಸಂಪಾದಕರ ನುಡಿ

ಸಂಸ್ಕೃತ ವಾಙ್ಮಯ ಪ್ರಪಂಚವು ಲೌಕಿಕ ಕಾವ್ಯಗಳಂತೆ ಉಪಯುಕ್ತವಾದ ಹಾಗೂ ಶ್ರೇಷ್ಠವಾದ ವೈದಿಕ ಗ್ರಂಥಗಳನ್ನು ಜಗತ್ತಿಗೆ ನೀಡಿದೆ. ಇವುಗಳ ವಿಷಯ ವೈವಿಧ್ಯ–ವೈಶಾಲ್ಯಗಳು ಅನ್ಯಾದೃಶವಾಗಿವೆ. ಪ್ರತಿಯೊಂದು ವಿಷಯವನ್ನು ಕುರಿತು ಆಳವಾದ ಚಿಂತನೆ, ಆಮೂಲಾಗ್ರಜ್ಞಾನವನ್ನು ಪ್ರಾಚೀನ ಭಾರತೀಯರು ಹೊಂದಿದ್ದರು ಎಂಬುದನ್ನು ಅವರ ರಚನೆಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಇಂತಹ ಉತ್ಕೃಷ್ಟಗ್ರಂಥಗಳಲ್ಲಿ ಇಂದಿಗೂ ಎಂದೆಂದಿಗೂ ಮೇರುಸ್ಥಾನದಲ್ಲಿ ನಿಲ್ಲುವ ಗ್ರಂಥ ಶ್ರೀಮನ್ಮಹಾಭಾರತ. ಶ್ರೀವೇದವ್ಯಾಸರು ರಚಿಸಿದ ಈ ಕೃತಿಯಲ್ಲಿ ಜಗತ್ತಿನ ಎಲ್ಲ ವಿಷಯಗಳು ಅಡಕವಾಗಿವೆ. **'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್'** ಎಂಬುದಾಗಿ ಮಹಾಭಾರತದ ಆದಿಪರ್ವದಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ. ಇದರಲ್ಲಿ ವಿವರಿಸಲಾಗಿರುವ ವಿಷಯಗಳು ಸಾರ್ವಕಾಲಿಕ ಹಾಗೂ ಸಾರ್ವಜನಿಕವಾಗಿವೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪರಮಪುರುಷಾರ್ಥಗಳ ನಿರೂಪಣೆ ಇದರಲ್ಲಿದೆ. ವಿಶ್ವಪ್ರಸಿದ್ಧವಾದ ಭಗವದ್ಗೀತೆಯೂ ಸಹ ಇದರ ಭಾಗವೇ ಆಗಿದೆ. ದಾಯಾದಿ ಕಲಹವನ್ನು ನೆಪ ಮಾಡಿಕೊಂಡು ಆದ್ಯಂತವಾಗಿ ಬದುಕಿನ ಎಲ್ಲ ವಿಧವಾದ ವಿಷಯಗಳನ್ನು ಸಕಲವರ್ಗದ ಎಲ್ಲ ವಯಸ್ಸಿನ ಜನರಿಗೂ ಅತ್ಯವಶ್ಯವಾಗಿ ಬೇಕಾಗಿರುವ ವಿಷಯಗಳನ್ನು ಅತ್ಯಂತ ಸರಸ ಹಾಗೂ ನಿಶ್ಚಪ್ರಚವಾಗಿ ನಿರೂಪಿಸಲಾಗಿದೆ. ಇಂದಿನ ಪ್ರಕ್ಷುಬ್ಧ ರಾಜಕೀಯ ವ್ಯವಸ್ಥೆಯಲ್ಲಿ ಪದೇ ಪದೇ ವಿಶ್ವದ ಮುಂದುವರೆದ ರಾಷ್ಟ್ರಗಳೆದುರು ಭಾರತೀಯ ಅರ್ಥವ್ಯವಸ್ಥೆಯ ಅಣಕವಾಗುತ್ತಿದೆ. ಇಂತಹ ಅವಮಾನಕರವಾದ ಪರಿಸ್ಥಿತಿಯನ್ನು ಸುಧಾರಿಸಲು ಶ್ರೀಮನ್ಮಮಹಾಭಾರತದಲ್ಲಿ ತಿಳಿಸಿರುವ ಅರ್ಥನೀತಿಯನ್ನು ಸರಿಯಾಗಿ ಅಭ್ಯಸಿಸಿ ಆಚರಣೆಗೆ ತಂದರೆ ದೇಶದ ಅರ್ಥವ್ಯವಸ್ಥೆಯನ್ನು ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ಯಬಹುದು. ಇಂತಹ ಧ್ಯೇಯೋದ್ದೇಶಗಳೊಂದಿಗೆ ಇಂದಿನ ಯುವಜನಾಂಗಕ್ಕೆ ಉತ್ತಮ ಆರ್ಥಿಕನೀತಿಯ ಜ್ಞಾನವನ್ನು ಹೊಂದಲು ಈ ಪಠ್ಯವು ಸಹಕಾರಿಯಾಗಬಹುದು ಎಂಬುದು ನಮ್ಮ ಆಶಯವಾಗಿದೆ. ಪ್ರಸ್ತುತ ಪಠ್ಯಭಾಗವು ಪೀಠಿಕೆ, ಮೂಲಸಂಸ್ಕೃತಶ್ಲೋಕಗಳು, ಕನ್ನಡ ಮತ್ತು ಆಂಗ್ಲಾನುವಾದಗಳಿಂದ ಕೂಡಿದೆ. ಈ ಪಠ್ಯವನ್ನು ಸಿದ್ಧಪಡಿಸಲು ಟಿ.ಆರ್. ಕೃಷ್ಣಾಚಾರ್ಯ ವಿರಚಿತ ಮಹಾಭಾರತಮ್, ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ (ಮಧ್ವಾಚಾರ್ಯ) ಕೆ.ಎಸ್. ನಾರಾಯಣಾಚಾರ್ಯರ ಶ್ರೀಮಹಾಭಾರತಪಾತ್ರಪ್ರಪಂಚ ಇನ್ನೂ ಮುಂತಾದ ಗ್ರಂಥಗಳ ಸಹಾಯವನ್ನು ಪಡೆದಿದ್ದೇವೆ. ಮೇಲೆ ತಿಳಿಸಿದ ಎಲ್ಲ ಗ್ರಂಥಕರ್ತೃಗಳಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಅವರಿಗೆ ನಾವು ಎಂದೆಂದಿಗೂ ಚಿರಋಣಿಗಳು.

ಭಾಷಾಧ್ಯಯನವನ್ನು ಪ್ರೋತ್ಸಾಹಿಸುವ ಹಾಗೂ ಎಲ್ಲಾ ರೀತಿಯಿಂದಲೂ ಸಹಕರಿಸುವ ಬೆಂಗಳೂರು ನಗರ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ.ಎಸ್. ಜಾಫೆಟ್ ಅವರಿಗೆ ನಮ್ಮ ಹೃತ್ಪೂರ್ವಕ ನಮನಗಳು. **ಮಹಾಭಾರತದಲ್ಲಿ ಅರ್ಥನೀತಿ** ಎಂಬ ವಿಷಯವನ್ನು ಪಠ್ಯಪುಸ್ತಕವನ್ನಾಗಿ ವಿದ್ಯಾರ್ಥಿಗಳಿಗೆ ನಿಯಮಿಸಿ ಅದರ ಸಂಪಾದನಾ ಕಾರ್ಯವನ್ನು ನಮಗೆ ವಹಿಸಿ ಪ್ರೋತ್ಸಾಹಿಸಿದ ಸಂಸ್ಕೃತ ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ॥ ಪಂಕಜ ನಯನ ಅವರಿಗೂ ಹಾಗೂ ಅಂದವಾಗಿ ಮುದ್ರಿಸಿದ ಪ್ರಸಾರಾಂಗದ ನಿರ್ದೇಶಕರಿಗೂ, ಸಿಬ್ಬಂದಿಗಳಿಗೂ ನಮ್ಮ ಕೃತಜ್ಞತೆಗಳು. ಈ ಪಠ್ಯಪುಸ್ತಕವನ್ನು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಂತೋಷದಿಂದ ಸ್ವೀಕರಿಸಿ ಉಪಯೋಗಪಡಿಸಿಕೊಂಡರೆ ನಮ್ಮ ಶ್ರಮ ಸಾರ್ಥಕ.

ಡಾ॥ ಎಂ. ಪದ್ಮನಾಭ ಮರಾಠೆ,
ಡಾ॥ ರಾಮರಾವ್ .ಎಸ್

ವಿಷಯಾನುಕ್ರಮಣಿಕ

1. ಮುನ್ನುಡಿ
2. ಸಂಪಾದಕರ ನುಡಿ
3. ಪ್ರಸ್ತಾವನೆ
4. Introduction
5. ಮೂಲ ಸಂಸ್ಕೃತ ಶ್ಲೋಕಗಳು (ಅರ್ಥನೀತಿ)
6. ಕನ್ನಡಾನುವಾದ
7. ಆಂಗ್ಲಾನುವಾದ

ಡಾ॥ ಎಂ. ಪದ್ಮನಾಭಮರಾತೆ
ನಿರ್ದೇಶಕರು,
ಶ್ರೀದುರ್ಗಾಸ್ನಾತಕೋತ್ತರ ಸಂಸ್ಕೃತ ಅಧ್ಯಯನ
ಮತ್ತು ಸಂಶೋಧನಾ ಕೇಂದ್ರ, ಕಟೀಲು, ದಕ್ಷಿಣ ಕನ್ನಡ

ಡಾ॥ ರಾಮರಾವ್ .ಎಸ್
ಮುಖ್ಯಸ್ಥರು,
ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು,
ಯಲಹಂಕ, ಬೆಂಗಳೂರು – 64

## ಶ್ರೀವ್ಯಾಸಮಹಾಭಾರತ

"ಜಯತಿ ಪರಾಶರಸೂನುಃಸತ್ಯವತೀಹೃದಯನಂದನೋವ್ಯಾಸಃ।
ಯಸ್ಯ ಆಸ್ಯಕಮಲಗಲಿತಂ ವಾಙ್ಮಯಮಮೃತಂ ಜಗತ್ಪಿಬತಿ॥"

ವಾಲ್ಮೀಕಿ ರಾಮಾಯಣವು ಭಾರತೀಯರಿಗೆ ಹೇಗೆ ಅತ್ಯಂತ ಪ್ರಿಯವೂ, ಪೂಜ್ಯವೂ ಆದ ಪವಿತ್ರಗ್ರಂಥವಾಗಿದೆಯೋ ಹಾಗೆಯೇ ಶ್ರೀ ವ್ಯಾಸಕೃತ ಮಹಾಭಾರತವೂ ಸಹ ಪಂಚಮವೇದ ಎಂಬುದಾಗಿಯೇ ಜನಜನಿತವಾಗಿದೆ. ಪ್ರಪಂಚದ ಯಾವುದೇ ಪ್ರಕಾರದ ಸಾಹಿತ್ಯದಲ್ಲೂ ಇಷ್ಟು ಬೃಹತ್ತಾದ ಮತ್ತು ಮಹತ್ತರವಾದ ಗ್ರಂಥ ಈ ತನಕ ದೊರಕಿಲ್ಲ. ಇದರಲ್ಲಿ ಸುಪ್ರಸಿದ್ಧವಾದ ಕುರುಪಾಂಡವರ ಕಥೆಯ ನಿರೂಪಣೆಯೊಂದಿಗೆ ವಿವಿಧ ಉಪಾಖ್ಯಾನಗಳು, ಧರ್ಮೋಪನ್ಯಾಸಗಳು, ತತ್ವವಿಚಾರಗಳು, ನೀತಿಬೋಧಗಳು ಹೀಗೆ ಹತ್ತು ಹಲವು ವಿಷಯಗಳು ಅಡಕವಾಗಿವೆ. ಕಾವ್ಯ ದೃಷ್ಟಿಯಿಂದಲೂ ಪರಿಶೀಲಿಸಿದಾಗ ರಸವತ್ತಾದ ಸನ್ನಿವೇಶಗಳು ವಿಫುಲವಾಗಿವೆ. ಇಂತಹ ಮಹಾಭಾರತವು ಕಾವ್ಯಶಾಸ್ತ್ರಗಳ ಸಮುದಾಯವಾಗಿದ್ದು ಸಾರ್ವಕಾಲಿಕ ಮತ್ತು ಸಾರ್ವಜನಿಕವಾಗಿದೆ. ಆದ್ದರಿಂದಲೇ

ಧರ್ಮೇಚಾರ್ಥೇಚ ಕಾಮೇಚ ಮೋಕ್ಷೇ ಚ ಭರತವರ್ಷಭ।
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನತತ್ ಕ್ವಚಿತ್॥
ಎಂಬ ಮಾತು ಅತಿಶಯೋಕ್ತಿಯೇನಲ್ಲ.
ಇದು ಇತಿಹಾಸಗ್ರಂಥವೂ ಆಗಿದೆ.

ತಪಸಾ ಬ್ರಹ್ಮಚರ್ಯೇಣ ವ್ಯಸ್ಯವೇದ ಸನಾತನಂ।
ಇತಿಹಾಸಮಿದಂ ಚಕ್ರೇ ಪುಣ್ಯಂ ಸತ್ಯವತೀಸುತಃ॥
ಎಂಬುದಾಗಿ ಮಹಾಭಾರತದ ಆದಿಪರ್ವದಲ್ಲಿ ಉಲ್ಲೇಖಿಸಲಾಗಿದೆ. ರಾಮಾಯಣದಂತೆ ಮಹಾಭಾರತರಚನಾ ಸಂದರ್ಭದಲ್ಲೂ ಚತುರ್ಮುಖ ಬ್ರಹ್ಮನು ಭೂಲೋಕಕ್ಕೆ ಬಂದು ವ್ಯಾಸರನ್ನು ಪ್ರೋತ್ಸಾಹಿಸುತ್ತಾನೆ. ಹಾಗೆಯೇ ಗ್ರಂಥದ ಲೇಖನಕ್ಕಾಗಿ ವಿಘ್ನೇಶನನ್ನು ಸ್ಮರಿಸಿ ಪರಸ್ಪರ ನಿಯಮಬದ್ಧರಾಗಿ ಕೃತಿಯನ್ನು ರಚಿಸಿದರು ಎಂಬ ವಿಷಯವೂ ಮಹಾಭಾರತದಲ್ಲಿ ಉಲ್ಲೇಖಿತವಾಗಿದೆ.

ಇದಂ ಶತಸಹಸ್ರಂ ತು ಲೋಕಾನಾಂ ಪುಣ್ಯಕರ್ಮಣಾಂ
ಉಪಾಖ್ಯಾನೈಃ ಸಹಜ್ಞೇಯಂ ಆದ್ಯಂ ಭಾರತಮುಕ್ತಮಮ್।
ಚತುರ್ವಿಂಶತಿಸಾಹಸ್ರೀಂ ಚಕ್ರೇ ಭಾರತಸಂಹಿತಾಂ
ಉಪಾಖ್ಯಾನೈರ್ವಿನಾ ತಾವದ್ ಭಾರತಂ ಪ್ರೋಚ್ಯತೇ ಬುಧೈಃ॥
ಎಂಬ ಮಾತಿನಂತೆ ಮಹಾಭಾರತದಲ್ಲಿ ವಿವಿಧ ವಿಷಯಗಳಿಗನುಗುಣವಾಗಿ 1 ಲಕ್ಷ ಶ್ಲೋಕಗಳು ರಚಿತವಾಗಿವೆ.

ಮಹಾಭಾರತದಲ್ಲಿ ಒಟ್ಟು ಹದಿನೆಂಟು ಪರ್ವಗಳಿವೆ. ಒಂದೊಂದು ಪರ್ವದಲ್ಲಿಯೂ ಪೌಷ್ಯಪರ್ವ, ಪೌಲೋಮಪರ್ವ – ಮುಂತಾದ ಒಂದು ನೂರು ಉಪಪರ್ವಗಳಿವೆ. ಅಧಿಕ ಸಂಖ್ಯೆಯ ಶ್ಲೋಕಗಳು ಅನುಷ್ಟುಪ್ ಛಂದಸ್ಸಿನಲ್ಲಿದೆ. ಹಾಗೆಯೇ ವೈದಿಕ ಛಂದಸ್ಸುಗಳೂ ಬಹಳಷ್ಟಿವೆ. ಅಲ್ಲಲ್ಲಿ ಗದ್ಯಭಾಗವೂ ಸಹ ಹೆಚ್ಚು ಕಡಿಮೆಯ ಪ್ರಮಾಣದಲ್ಲಿ ಕಾಣಿಸುತ್ತದೆ. 'ಜಯೋ ನಾಮೇತಿಹಾಸೋಯಮ್' ಎಂಬ

ಮಾತಿನಂತೆ ಮಹಾಭಾರತವು 'ಜಯ' ಎಂಬ ಇತಿಹಾಸಗ್ರಂಥ. 'ಕಟಪಯಾದಿ' ಸೂತ್ರದ ಲೆಕ್ಕದಂತೆ 'ಜಯ' ಎಂಬ ಪದವು 'ಹದಿನೆಂಟನೇ ಸಂಖ್ಯೆಯನ್ನು ಸೂಚಿಸುತ್ತದೆ. 18 ಪರ್ವಗಳು, 18 ದಿನಗಳ ಅವಧಿಯ ಯುದ್ಧ, ಭಗವದ್ಗೀತೆಯಲ್ಲಿನ 18 ಅಧ್ಯಾಯಗಳು, 18 ಅಕ್ಷೋಹಿಣಿ ಸೇನೆ ಎಂಬ ವಿಚಾರದಿಂದ ಮಹಾಭಾರತದ ಸಂಖ್ಯೆ 18' ಎಂದು ತಿಳಿಯಬಹುದು.

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಗಳಿಗೆ ಸಂಬಂಧಿಸಿದ ವಿಚಾರ ಪರಂಪರೆಗಳು ಮಹಾಭಾರತದಲ್ಲಿ ತುಂಬಿ ತುಳುಕಿವೆ. ವೀರ ರಸ ಪ್ರಧಾನವಾಗಿದ್ದರೂ ಶಾಂತಿ, ಕರುಣಾದಿ ರಸಗಳ ಸಂದರ್ಭಗಳು ಅಲ್ಲಲ್ಲಿ ರೂಪಿತವಾಗಿವೆ. ರಸಗಳ ರಾಜನೆಂದೇ ಖ್ಯಾತವಾಗಿರುವ ಶೃಂಗಾರ-ರಸವು ಉಪಾಖ್ಯಾನಗಳಲ್ಲಿ ನಿರೂಪಿತವಾಗಿದೆ. ಭೀಷ್ಮ ಪರ್ವಾಂತರ್ಗತವಾದ ಭಗವದ್ಗೀತೆಯು ಜಗತ್ಪ್ರಸಿದ್ಧವಾಗಿದೆ. ಅಷ್ಟೇ ಅಲ್ಲದೆ ಮಂಕಿಗೀತೆ, ಹಂಸಗೀತೆ, ಪಿಂಗಲಗೀತೆ, ಹಾರೀತಗೀತೆ ಮುಂತಾದ ಬಿಡಿ ಪ್ರಕರಣಗಳೂ ಸಹ ಕಾಣಸಿಗುತ್ತವೆ. ಇನ್ನು ಮಹಾಭಾರತದಲ್ಲಿಯೇ ನಿರೂಪಿತವಾಗಿರುವಂತೆ ದೇವತೆಗಳು ಒಂದು ಕಡೆ ಮಹಾಭಾರತವನ್ನೂ ಮತ್ತೊಂದು ಕಡೆ ವೇದೋಪನಿಷತ್ತುಗಳನ್ನೂ ತಕ್ಕಡಿಯಲ್ಲಿಟ್ಟು ತುಲನೆ ಮಾಡಿದಾಗ ಮಹಾಭಾರತದ ಭಾರವೇ ಅಧಿಕವಾಯಿತು. ಅಂದಿನಿಂದ ಈ ಕೃತಿಯು ಲೋಕದಲ್ಲಿ 'ಮಹಾಭಾರತ' ಎಂದು ಪ್ರಸಿದ್ಧವಾಯಿತು. ಗಾತ್ರದಲ್ಲಿಯೂ, ವಿಷಯನಿರೂಪಣೆಯಲ್ಲಿಯೂ ಸಹ ಈ ಗ್ರಂಥವು ದೊಡ್ಡದಾದದ್ದರಿಂದ 'ಮಹಾಭಾರತ' ಎಂದು ಕರೆಯಲ್ಪಟ್ಟಿತು.

ಪುರಾ ಕಿಲ ಸುರೈಃ ಸರ್ವೈಃ ಸಮೇತ್ಯ ತುಲಯಾ ಧೃತಮ್।
ಚತುರ್ಭ್ಯಃ ಸರಹಸ್ಯೇಭ್ಯೋ ವೇದೇಭ್ಯೋಽಹ್ಯಧಿಕಂ ಯದಾ।
ತದಾಪ್ರಭೃತಿ ಲೋಕೋಽಸ್ಮಿನ್ ಮಹಾಭಾರತಮುಚ್ಯತೇ॥
ಮಹತ್ವೇ ಚ ಗುರುತ್ವೇಚ ಧ್ರಿಯಮಾಣಂ ಯಶೋಽಧಿಕಮ್।
ಮಹತ್ವಾತ್ ಭಾರವತ್ವಾಚ್ಚ ಮಹಾಭಾರತಮುಚ್ಯತೇ ॥ (ಆದಿಪರ್ವ 1-269, 271)

ಮಹಾಭಾರತದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಶ್ಲೋಕಗಳಿದ್ದು ವಿವಿಧ ವಿಷಯಗಳನ್ನು ಪ್ರತಿಪಾದಿಸಲಾಗಿದೆ. ಇದು ಸಾಹಿತ್ಯಿಕ ಲೋಕದಲ್ಲಿಯೇ ಅತ್ಯಂತ ಬೃಹತ್ತಾದ ಗ್ರಂಥ ಎನಿಸಿದೆ. ಹೋಮರ್ ಮಹಾಕವಿಯ ಇಲಿಯಡ್ ಮತ್ತು ಒಡೆಸ್ಸಿ ಎಂಬ ಎರಡು ಬೃಹತ್ ಗ್ರಂಥಗಳ ಗಾತ್ರದ ಎಂಟು ಪಟ್ಟು ಹೆಚ್ಚು ಮಹಾಭಾರತದ ಗಾತ್ರವಾಗಿದೆಯೆಂದರೆ ಇದರ ಗಾತ್ರದ ಅರಿವು ಎಷ್ಟೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಈ ಗ್ರಂಥವನ್ನು ಹಿಮಾಲಯ ಪರ್ವತ ಮತ್ತು ಸಮುದ್ರಗಳೊಂದಿಗೆ ತುಲನೆ ಮಾಡಿರುವುದು ಅತ್ಯಂತ ಔಚಿತ್ಯವಾಗಿದೆ.

ಯಥಾಸಮುದ್ರೋ ಭಗವಾನ್ ಯಥಾಚ ಹಿಮವಾನ್ ಗಿರಿಃ।
ಖ್ಯಾತಾವುಭೌ ರತ್ನನಿಧೀ ತಥಾ ಭಾರತಮುಚ್ಯತೇ॥

ಮಹಾಭಾರತದಲ್ಲಿ 18 ಪರ್ವಗಳೂ, 2019 ಅಧ್ಯಾಯಗಳೂ ಇವೆ. (ಹರಿವಂಶವು 19ನೇ ಪರ್ವಕ್ಕೆ ಹತ್ತಿರವಾಗಿದೆ). ಈ ಪರ್ವಗಳು ಅಸಮಾವಾಗಿದ್ದು ಸುಮಾರು 14,000 ಶ್ಲೋಕಗಳುಳ್ಳ ಶಾಂತಿಪರ್ವವು ಅತ್ಯಂತ ದೀರ್ಘವಾಗಿದ್ದರೆ, 312 ಶ್ಲೋಕಗಳುಳ್ಳ ಮಹಾಪ್ರಾಸ್ತಾನಿಕಪರ್ವವು ಮತ್ತು ಸ್ವರ್ಗಾರೋಹಣ ಪರ್ವಗಳನ್ನು ಹೊರತುಪಡಿಸಿ ಉಳಿದೆಲ್ಲ ಪರ್ವಗಳಲ್ಲಿ ಅವಾಂತರ ಪರ್ವಗಳಿದ್ದು ಎಲ್ಲ ಹದಿನೆಂಟು ಪರ್ವಗಳನ್ನು ಅಧ್ಯಾಯಗಳನ್ನಾಗಿ ವಿಭಜಿಸಲಾಗಿದೆ.

ಮಹಾಭಾರತದ 18 ಪರ್ವಗಳು ಮತ್ತು ಅವುಗಳ ಸಂಕ್ಷಿಪ್ತ ಪರಿಚಯ :

1. ಆದಿಪರ್ವ – ಕುರುವಂಶ ಪಿತಾಮಹನಾದ ಭೀಷ್ಮನಿಂದ ವಂಶರಕ್ಷಣೆ, ಧೃತರಾಷ್ಟ್ರ, ಪಾಂಡು, ವಿದುರರ ಜನನ ಮತ್ತು ಪೋಷಣೆ, ಜಾತ್ಯಂಧನಾದ ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ 100 ಮಕ್ಕಳ ಜನನ, ಪಾಂಡುವಿಗೆ ಕುಂತಿ ಹಾಗೂ ಮಾದ್ರಿಯಲ್ಲಿ ಪಂಚಪಾಂಡವರ ಜನನದ ಕಥೆಯನ್ನು ನಿರೂಪಿಸಲಾಗಿದೆ.
2. ಸಭಾಪರ್ವ – ಹಸ್ತಿನಾಪುರದಲ್ಲಿ ಕೌರವ–ಪಾಂಡವರ ಸಭೆಯಲ್ಲಿ ಇಬ್ಬರ ನಡುವೆ ಪಗಡೆಯಾಟ, ಅದರಲ್ಲಿ ಸೋತ ಪಾಂಡವರ ವನವಾಸದ ಕಥೆಯು ನಿರೂಪಿತವಾಗಿದೆ.
3. ವನಪರ್ವ – ಪಾಂಡವರ 12 ವರ್ಷಗಳ ವನವಾಸದ ಕಥೆಯೊಂದಿಗೆ ನಳೋಪಾಖ್ಯಾನ, ಕಿರಾತಾರ್ಜನೀಯ ಮುಂತಾದ ಉಪಾಖ್ಯಾನಗಳನ್ನು ನಿರೂಪಿಸಲಾಗಿದೆ.
4. ವಿರಾಟಪರ್ವ – ವಿರಾಟರಾಜ್ಯದಲ್ಲಿ 1 ವರ್ಷಾವಧಿಯ ಅಜ್ಞಾತವಾಸದೊಂದಿಗೆ ಕೀಚಕ ಸಂಹಾರ, ಗೋಗ್ರಹಣಾದಿ ಸಾಹಸಗಾಥೆಗಳ ನಿರೂಪಣೆಯಿದೆ.
5. ಉದ್ಯೋಗ ಪರ್ವ – ದಾಯಾದಿಗಳಾದ ಕೌರವ–ಪಾಂಡವರ ನಡುವೆ ನಿರ್ಧರಿಸಿದ ಸಮರಾಭ್ಯಾಸದ ವರ್ಣನೆಯಿದೆ.
6. ಭೀಷ್ಮಪರ್ವ – ಯುದ್ಧ ಸನ್ನದ್ಧರಾದ ಕೌರವ–ಪಾಂಡವ ಸೇನೆಗಳಿಗೆ ಸೇನಾಧಿಪತಿಯ ಆಯ್ಕೆ, ಭೀಷ್ಮನಿಗೆ ಕೌರವ ಸೇನಾಧಿಪತಿಯಾಗಿ ಪಟ್ಟಾಭಿಷೇಕ, ಯುದ್ಧದಲ್ಲಿ ಭೀಷ್ಮನ ಸೋಲು ಮತ್ತು ಶರಮಂಚವಾಸದ ವರ್ಣನೆಗಳಿವೆ.
7. ದ್ರೋಣ ಪರ್ವ – ಭೀಷ್ಮರ ನಮತರ ದ್ರೋಣರಿಗೆ ಸೇನಾಧಿಪತ್ಯ, ಯುದ್ಧದಲ್ಲಿ ಧೃಷ್ಟದ್ಯುಮ್ನನಿಂದ ದ್ರೋಣರ ಹತ್ಯೆಯ ನಿರೂಪಣೆಯಿದೆ.
8. ಕರ್ಣ ಪರ್ವ – ಭೀಷ್ಮ–ದ್ರೋಣರ ಸಾವಿನಿಂದ ಕಂಗಾಲಾದ ಕೌರವ ಸೇನೆಗೆ ಕರ್ಣನ ಅಧಿಪತ್ಯ, ಕರ್ಣಾರ್ಜುನ ಯುದ್ಧದಲ್ಲಿ ಕರ್ಣನ ಅವಸಾನದ ಕಥೆಯು ನಿರೂಪಿತವಾಗಿದೆ.
9. ಶಲ್ಯ ಪರ್ವ – ದಿಗ್ಗಜ ಯೋಧರ ಅವಸಾನದಿಂದ ಕಂಗೆಟ್ಟ ಕೌರವ ಸೇನೆಯನ್ನು ಮುನ್ನಡೆಸಲು ಶಲ್ಯನಿಗೆ ನಾಯಕತ್ವದ ಹೊಣೆ, ಯುದ್ಧದ ಕೊನೆಯ ಕ್ಷಣಗಳು, ಭೀಮ–ದುರ್ಯೋಧನರ ಗಧಾಯುದ್ಧದಲ್ಲಿ ದುರ್ಯೋಧನನ ಅಂತ್ಯ ಹಾಗೂ ಕೇವಲ ಮೂರೇ ಕೌರವರು ಉಳಿಯುವ ಕಥಾನಿರೂಪಣೆಯಿದೆ.
10. ಸೌಪ್ತಿಕ ಪರ್ವ – ಬದುಕುಳಿದ ಮೂವರು ಕೌರವರಿಂದ ರಾತ್ರೋ ರಾತ್ರಿ ಪಾಂಡವ ಶಿಬಿರದ ಮೇಲೆ ದಾಳಿ, ಪಂಚ ಪಾಂಡವರನ್ನು ಹೊರತುಪಡಿಸಿ ಸಮಗ್ರಸೇನೆಯ ವಿನಾಶದ ನಿರೂಪಣೆಯಿದೆ.
11. ಸ್ತ್ರೀ ಪರ್ವ – ಯುದ್ಧದಲ್ಲಿ ಮೃತರಾದ ಕೌರವವೀರರ ಹೆಣಗಳ ರಾಶಿಯೆದುರು ಗಾಂಧಾರಿ ಮೊದಲಾದ ಸ್ತ್ರೀಯರ ವಿಲಾಪದ ನಿರೂಪಣೆ.
12. ಶಾಂತಿಪರ್ವ – ಯುಧಿಷ್ಠಿರನ ಪಟ್ಟಾಭಿಷೇಕ, ಭೀಷ್ಮೋಪದೇಶ, ವಿಷ್ಣು ಸಹಸ್ರನಾಮ ಪ್ರಸಂಗಗಳ ವರ್ಣನೆಯಿದೆ.
13. ಅನುಶಾಸನ ಪರ್ವ – ಭೀಷ್ಮೋಪದೇಶದ ಮುಂದುವರಿದ ಭಾಗ, ಮತ್ತು ಭೀಷ್ಮನ ಅಂತಿಮ ಪ್ರಯಾಣದ ವರ್ಣನೆ ನಿರೂಪಿತವಾಗಿದೆ.

14. ಅಶ್ವಮೇಧಿಕ ಪರ್ವ – ದಿಗ್ವಿಜಯಿಯಾದ ಯುಧಿಷ್ಠಿರನು ತನ್ನ ಸಾರ್ವಭೌಮತ್ವದ ಸಂಕೇತವಾದ ಅಶ್ವಮೇಧಯಾಗವನ್ನು ಆಚರಿಸುವ ಕಥಾ ವಸ್ತುವಿನ ನಿರೂಪಣೆ ಮುಖ್ಯವಾಗಿದೆ.
15. ಆಶ್ರಮವಾಸಿಕ ಪರ್ವ – ಧೃತರಾಷ್ಟ್ರನು ಪತ್ನಿ ಗಾಂಧಾರಿ ಹಾಗೂ ಕುಂತಿಯೊಂದಿಗೆ ವನವಾಸಕ್ಕೆ ತೆರಳುವುದು. ಎರಡು ವರ್ಷಗಳ ನಂತರ ಕಾಡ್ಗಿಚ್ಚಿನ ಬೆಂಕಿಯಲ್ಲಿ ಆತ್ಮಾರ್ಪಣೆಗೈದು ಸ್ವರ್ಗವನ್ನು ಪಡೆಯಲೆತ್ನಿಸುವ ಕಥೆಯು ನಿರೂಪಿತವಾಗಿದೆ.
16. ಮೌಸಲ ಪರ್ವ – ಅವತಾರ ಪುರುಷರಾದ ಶ್ರೀಕೃಷ್ಣ ಹಾಗೂ ಬಲರಾಮರ ಪರಲೋಕಯಾತ್ರೆ, ದ್ವಾರಕೆಯು ಸಮುದ್ರದಲ್ಲಿ ಮುಳುಗುವುದು, ಯಾದವೀಕಲಹದ ಪರಿಣಾಮವಾಗಿ ಯದುವಂಶ ನಿರ್ನಾಮವಾಗುವ ವಿಷಯಗಳು ನಿರೂಪಿತವಾಗಿವೆ.
17. ಮಹಾಪ್ರಾಸ್ಥಾನಿಕ ಪರ್ವ – ವೈರಾಗ್ಯ ಶಾಲಿಯಾದ ಯುಧಿಷ್ಠಿರನು ರಾಜ್ಯವನ್ನು ತ್ಯಜಿಸಿ ತನ್ನ ನಾಲ್ವರು ಸಹೋದರರೊಂದಿಗೆ ಮತ್ತೆ ದ್ರೌಪದಿಯೊಂದಿಗೆ ಸ್ವರ್ಗಕ್ಕೆ ತೆರಳಲು ಬಯಸಿ ಮೇರುಪರ್ವತದೆಡೆಗೆ ಹೊರಡುವ ಕಥಾನಿರೂಪಣೆಯಿದೆ.
18. ಸ್ವರ್ಗಾರೋಹಣ ಪರ್ವ – ಪಂಚಪಾಂಡವರೊಂದಿಗೆ ಸಾಧ್ವಿ ದ್ರೌಪದಿಯು ಸ್ವರ್ಗವನ್ನೇರುವ ಮತ್ತು ತಲುಪುವ ಕಥಾನಿರೂಪಣೆಯೊಂದಿಗೆ ಮುಕ್ತಾಯವಾಗುತ್ತದೆ.

## ಶ್ರೀವೇದವ್ಯಾಸರು

ಅವತಾರವಪುಃ ಶ್ರೀಮಾನ್ ಅಪಾರಜ್ಞಾನವಾನ್ವಿಭುಃ
ಅಷ್ಟಾದಶಪುರಾಣಾನಾಂ ಬ್ರಹ್ಮಸೂತ್ರಕೃತಪ್ರಭುಃ।
ಪರಾಶರಾತ್ಮಜೋಕೃಷ್ಣಃ ಪರತತ್ವ ಪ್ರಬೋಧಕಃ
ಪ್ರತಿಷ್ಠಾಂ ಗಮಯೇತ್ಪ್ರಾಜ್ಞಃ ಅಪ್ರಮೇಯಕ್ರಿಯಾನ್ವಿತಃ ॥

ಭಗವಾನ್ ವೇದವ್ಯಾಸರು ಅನಂತಜ್ಞಾನ ನಿಧಿ, ಅಂತಹ ಜ್ಞಾನನಿಧಿಯ ಪರಮಾಣು ಸ್ವರೂಪವೆಂಬಂತೆ ಶ್ರೀಮನ್ಮಹಾಭಾರತ, ಬೃಹಸ್ಪತಿಯ ಬುದ್ಧಿಗೂ ಪೂರ್ಣರೂಪದಲ್ಲಿ ಗೋಚರಿಸಿದ, ಬ್ರಹ್ಮಣಸ್ಪತಿಯ ಜ್ಞಾನಕ್ಕೂ ಒರೆಗಲ್ಲು ಈ ಮಹಾಭಾರತ ಪ್ರತಿಯೊಂದು ವೇದಋಕ್ಕಿಗೂ ಮೂರು ಅರ್ಥಗಳಿದ್ದರೆ ಮಹಾಭಾರತದ ಒಂದೊಂದು ಶ್ಲೋಕಕ್ಕೂ ಹತ್ತು ಅರ್ಥಗಳಿವೆ. ಮಹಾಭಾರತಾಂತರ್ಗತವಾದ ಶ್ರೀವಿಷ್ಣುಸಹಸ್ರನಾಮಕ್ಕೆ ನೂರು ಅರ್ಥಗಳಿವೆ. ಹೀಗೆ ನಾನಾರ್ಥಗಳಿಂದ ತುಂಬಿದ, ಶೇಷಾದಿ ದೇವತೆಗಳಿಗೂ ಸಂಪೂರ್ಣವಾಗಿ ತಿಳಿಯಲಾಗದ ಅಗಮ್ಯಾದ್ಭುತ ಗ್ರಂಥ ಈ ಮಹಾಭಾರತ. ಎಲ್ಲರಿಂದಲೂ ತಿಳಿದಿದ್ದರೂ ತಿಳಿಯಲು ಬಹಳಷ್ಟಿದೆ. ಬಹಳ ಪರೋಕ್ಷಾರ್ಥಗಳಿಂದ ಕೂಡಿದ, ದೇವ-ಮಾನವರಿಗೂ ಎಟುಕದ ದಿವ್ಯತತ್ವನಿಧಿಗಳ ಆಕರ ಶ್ರೀಮನ್ಮಹಾಭಾರತ. ಆದ್ದರಿಂದಲೇ ದೇವತೆಗಳೆಲ್ಲರೂ ವ್ಯಾಸರ ಸಮ್ಮುಖದಲ್ಲಿ ಒತ್ತಾಸೆಯಿಂದ ಪಠಿಸಿದರು. ಭಗವಾನ್ ವೇದವ್ಯಾಸರ ಬುದ್ಧಿಮತ್ತೆಯನ್ನು ಚೆನ್ನಾಗಿ ತುಲನೆ ಮಾಡಿ ಸಕಲಶಾಸ್ತ್ರಾರ್ಥಗಳಿಂದ ಹಾಗೂ ಗಂಭೀರಾರ್ಥಗಳನ್ನೊಳಗೊಂಡ ಮಹಾನ್ ಗ್ರಂಥವೇ ಶ್ರೀಮನ್ಮಹಾಭಾರತವೆಂದು ಉದ್ಘೋಷಿಸಿದರು. ಸಕಲ ಶಾಸ್ತ್ರಾತಿಶಾಯಿಯಾದ ಈ ಕೃತಿಯನ್ನು 'ಜಯ' ಎಂಬುದಾಗಿ ಕರೆದು "ಶ್ರೀಮನ್ಮಹಾಭಾರತ"ವೆಂಬ ಶಬ್ದದ ನಿರ್ವಚನೆಯ ಜ್ಞಾನವು ಸಕಲಪಾಪಗಳನ್ನು ತೊಳೆಯುವ ಸಾಧನವೆಂದು ಉದ್ಗರಿಸಿದರು. ಸ್ವತಃ ವ್ಯಾಸರೇ

ಜಯೋ ನಾಮೇತಿ ಹಾಸೋಽಯಂ ಕೃಷ್ಣದ್ವೈಪಾಯನೇರಿತಃ।
ವೇದಾದಪಿ ಪರಂ ಚಕ್ರೇ ಪಂಚಮುಂ ವೇದಮುತ್ತಮಮ್ ॥
ಮಹತ್ವಾತ್ ಭಾರವತ್ವಾಚ್ಚ ಮಹಾಭಾರತಮುಚ್ಯತೇ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥
ಎಂಬುದಾಗಿ ಇದರ ಮಹತ್ವವನ್ನು ಸಾರಿದ್ದಾರೆ (ಮ.ಭಾ. ಆದಿಪರ್ವ)

ಯುಗಾಂತಗಳಲ್ಲಿ ಧರ್ಮಜ್ಞಾನಾದಿಗಳಿಂದ ವಂಚಿತರಾದ ಜನರ ಬಗ್ಗೆ ಅನುಕಂಪಗೊಂಡ ಬ್ರಹ್ಮರುದ್ರಾದಿ ದೇವತೆಗಳು ಪ್ರಾರ್ಥಿಸಲಾಗಿ ಜ್ಞಾನಪ್ರಕಾಶಕ್ಕಾಗಿ ಭಗವಾನ್ ವೇದವ್ಯಾಸರು ಅವತರಿಸಿದರು. ಬಳಿಕ ಇಷ್ಟಾನಿಷ್ಟ ಪ್ರಾಪ್ತಿ-ಪರಿಹಾರ ಸಾಧನೆಗಳ ಪ್ರಕಾಶನದಿಂದಲೂ, ವೇದಾರ್ಥದ ಜ್ಞಾನದಿಂದಲೂ, ಸಂಸಾರಸಾಗರದಲ್ಲಿ ಸಿಲುಕಿ ನಲುಗುತ್ತಿರುವ ವೇದಾನಧಿಕಾರಿಗಳಾದ ಸ್ತ್ರೀಶೂದ್ರಾದಿಗಳಿಗೆ ಧರ್ಮಜ್ಞಾನದ್ವಾರ ಮೋಕ್ಷವು ಸಿದ್ಧಿಸಲಿ ಎಂಬ ಕೃಪಾಶೀರ್ವಾದದಿಂದ ಸಕಲವೇದೋಪನಿಷತ್ತುಗಳ ಅರ್ಥದಿಂದ ಕೂಡಿದ ಅವುಗಳಲ್ಲಿ ಅನುಕ್ತವಾದ (ಹೇಳಿರದ) ಕೇವಲ ಭಗವಂತನ ಜ್ಞಾನವಿಷಯಕವಾದ ಪ್ರತಿಯೊಬ್ಬ ಜೀವಿಗೂ ತಿಳಿಯಲು ಶಕ್ಯಾಶಕ್ಯರೂಪವಾದ ಕೇವಲ ಭಗವತ್ಸ್ವರೂಪಭೂತನಾದ ಪರೋಕ್ಷಾರ್ಥಗಳಿಂದ ಕೂಡಿದ ಮಹಾಭಾರತವನ್ನು ರಚಿಸಿದರು.

ಪರಾಪರತತ್ವಜ್ಞಾನವೇ ಸಂಸಾರಮೋಚನ. ಇದರ ಅಭಾವದಿಂದಲೇ ಸಜ್ಜನರು ಸಂಸಾರದಲ್ಲಿ ಬಹಳ ದುಃಖಿಗಳಾಗಿದ್ದಾರೆ. ಅಂತಹ ಶೋಕಸಾಗರದಿಂದ ಮುಕ್ತವಾಗುವ ದಿವ್ಯಜ್ಞಾನವನ್ನು ನೀಡಬೇಕೆಂದು ಭಗವಂತನಾದ ನಾರಾಯಣನನ್ನು ಪ್ರಾರ್ಥಿಸಿದರು. ಇಂತಹ ಜ್ಞಾನೋಪದೇಶಕ್ಕಾಗಿಯೇ ಶ್ರೀ ವೇದವ್ಯಾಸರ ಅವತಾರವಾಯಿತು. ಇದು ಅವರಲ್ಲದೆ ಬೇರೆಯವರಿಂದ ಸಾಧ್ಯವಾಗದು. ಅದರ ಪರಮೋದ್ದೇಶವು ಶ್ರೀಮನ್ಮಹಾಬಾರತದ ರಚನೆಯಿಂದ ಈಡೇರಿತು. ವೇದವ್ಯಾಸರ ಅಭಿಪ್ರಾಯದಂತೆ ಶ್ರೀಮನ್ಮಹಾಬಾರತವು ಒಂದು ಕಾವ್ಯವೂ ಹೌದು, 'ಕವಿ' ಎಂದರೆ ಜ್ಞಾನೀ ಎಂದರ್ಥ. ಜ್ಞಾನಿಯೆಂದರೆ ವಾಲ್ಮೀಕಿ ಮುಂತಾದವರಂತೆ ಋಷಿಗಳಂತೆ ಅಲ್ಲ, ನಿತ್ಯ ಜ್ಞಾನಮೂರ್ತಿಯಾಗಿರಬೇಕು. ಅನನ್ಯವಾದ ಅನಂತವಾದ, ತನ್ನ ಸರ್ವರ ಮತ್ತು ಸರ್ವವಿಧ ಜ್ಞಾನಮೂರ್ತಿ ಶ್ರೀ ವೇದವ್ಯಾಸರು ಅವರೇ ನಿಜವಾದ ಕವಿ. ಈ ಮಹಾಭಾರತವು ಅವರದೇ ಕೃತಿರತ್ನ. ಬೇರೊಬ್ಬರಿಂದ ರಚಿಸಲು ಅಶಕ್ಯವಾದುದು. ಪಂಚರಾತ್ರ, ವಾಯುಪ್ರೋಕ್ತಭಾರತ ಮತ್ತು ವಿಷ್ಣುಪುರಾಣಗಳಲ್ಲಿ ಹೀಗೆ ಉಲ್ಲೇಖಿಸಲಾಗಿದೆ.

ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋಹ್ಯನ್ಯಃ ಪುಂಡರೀಕಾಕ್ಷಾತ್ ಮಹಾಭಾರತಕೃದ್ಭವೇತ್॥ ಎಂಬುದಾಗಿ

ಇತರ ಕವಿಗಳಿಗೆ ಸಂಪೂರ್ಣವಾಗಿ ವರ್ಣಿಸಲು ಅಸಾಧ್ಯವಾದುದು ಈ ಮಹಾಭಾರತ. ಇಲ್ಲಿ ಹೇಳದಿರುವ ವಿಷಯಗಳಿಲ್ಲ. ಕಗ್ಗತ್ತಲೆಯಂತಹ ಜ್ಞಾನಾಂಧಾಕಾರದಲ್ಲಿ ಮುಳುಗಿದ ಜಗತ್ತಿಗೆ ಭಾರತ ಸೂರ್ಯನಿಲ್ಲದಿದ್ದರೆ ಅಂಧಕಾರವೇ ಗತಿ. ಇಂತಹ ಪ್ರದೀಪವಿಲ್ಲದೆ ಜನರು ಅಂಧರಂತೆ ಕಿವುಡರಂತೆ, ಹುಚ್ಚರಂತೆ ಆಗಬೇಕಾದೀತು. ಗಾತ್ರದಲ್ಲಿ, ಅರ್ಥದಲ್ಲಿ, ವಿಮರ್ಶೆಯಲ್ಲಿ ಮತ್ತು ವಿಷಯದಲ್ಲಿ ಇಂತಹ ಬೃಹದ್ಗ್ರಂಥ ಪ್ರಪಂಚದಲ್ಲಿ ಎಲ್ಲಿಯೂ ಕಾಣಸಿಗದು. ಈ ಕೃತಿಯು ಅರ್ಥಶಾಸ್ತ್ರಕ್ಕೆ ಸಂಪತ್ತು, ಧರ್ಮಶಾಸ್ತ್ರಕ್ಕೆ ಸಂವಿಧಾನ, ಮುಮುಕ್ಷುಗಳಿಗೆ ಮೋಕ್ಷರೂಪ ರಾಜಧರ್ಮ, ಬ್ರಾಹ್ಮಣಕುಲಕ್ಕೆ ಅತ್ಯವಶ್ಯವಾದ ವೇದಸಾರ ಮತ್ತು ಯೋಗಿಗಳಿಗೆ ತತ್ವವಿವೇಕದ ಗಣಿಯಾಗಿದೆ. ಇದರ ಜ್ಞಾನವಿಲ್ಲದೆ ಭೂಲೋಕದಲ್ಲಿ ಜೀವಿಸುವ ನಾವು ಸ್ವರ್ಗವನ್ನು ಏರಲಾಗದು. ವೇದಾನಧಿಕಾರಿಗಳಿಗೆ ವೇದತುಲ್ಯಗ್ರಂಥ. ವೇದಾಧಿಕಾರಿಗಳಿಗಂತೂ ವೇದಾರ್ಥಜ್ಞಾನನಿಧಿಯಾಗಿದೆ. ಆದ್ದರಿಂದಲೇ ಇದು 'ಕಾರ್ಷ್ಣ್ಯವೇದ' ಎಂದು ಪ್ರಸಿದ್ಧವಾಗಿದೆ. ಆದ್ದರಿಂದಲೇ ಇಲ್ಲಿ ಕಪಟವಿಲ್ಲ, ಅಷ್ಟೇ ಅಲ್ಲ, ಸಕಲಶಾಸ್ತ್ರ ಸಂಬದ್ಧವಾದ ಎಲ್ಲಾ ವಿಷಯಗಳೂ ಇಲ್ಲಿವೆ. ಹಾಗಾಗಿಯೇ 'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿನ ತತ್ ಕ್ವಚಿತ್' ಎಂಬ ಮಾತು ಅತಿಶಯೋಕ್ತಿಯಲ್ಲ. ಹೀಗೆ ವೇದವ್ಯಾಸರು ಮಹಾಭಾರತವನ್ನು ರಚಿಸಿದರು.

**ಮಹಾಭಾರತದ ರಚನೆ ಮತ್ತು ಲೇಖನ :**

ರಾಮಾಯಣ ರಚನಾಸಂದರ್ಭದಂತೆ ಮಹಾಭಾರತ ರಚನಾವಸರದಲ್ಲಿಯೂ ಚತುರ್ಮುಖ ಬ್ರಹ್ಮನು ಬಂದು ವಾಲ್ಮೀಕಿಯನ್ನು ಪ್ರೋತ್ಸಾಹಿಸಿದಂತೆ ವೇದವ್ಯಾಸರನ್ನು ಪ್ರಾರ್ಥಿಸಿದರು. ಆಗ 'ಈ ಲೋಕದಲ್ಲಿ ಯಾರಾದರೂ ಲೇಖಕನು ದೊರಕುವನೆ?' ಎಂದು ಕೇಳಿದರು. ಬಳಿಕ ಬ್ರಹ್ಮನು 'ಗ್ರಂಥದ ಲೇಖನಕ್ಕಾಗಿ ಗಣೇಶನನ್ನು ಸ್ಮರಿಸಿ' ಎಂದು ಸೂಚಿಸಿದನು.

ತತಃ ಸಸ್ಮಾರ ಹೇರಂಬಂ ವ್ಯಾಸಃ ಸತ್ಯವತೀ ಸುತಃ।
ಸ್ಮೃತಮಾತ್ರೋ ಗಣೇಶಾನೋ ಭಕ್ತಿಚಿಂತಿತಪೂರಕಃ॥
ತತ್ರಾಜಗಾಮ ವಿಘ್ನೇಶೋ ವೇದವ್ಯಾಸೋ ಯತಸ್ಥಿತಃ।
ಪೂಜಿತಶ್ಚೋಪವಿಷ್ಟಶ್ಚ ವ್ಯಾಸೇನೋಕ್ತಸ್ತದಾ,,ನಘ॥
ಲೇಖಕೋ ಭಾರತಸ್ಯಾಸ್ಯ ಭವ ತ್ವಂ ಗಣನಾಯಕ।
ಮಯ್ಯೈವ ಪ್ರೋಚ್ಯಮಾನಸ್ಯ ಮನಸಾ ಕಲ್ಪಿತಸ್ಯಚ॥
ಶ್ರುತ್ವೈತತ್ ಪ್ರಾಹ ವಿಘ್ನೇಶೋ ಯದಿ ಮೇ ಲೇಖನೀ ಕ್ಷಣಮ್ ।
ಲಿಖಿತೋ ನಾವತಿಷ್ಠೇತ ತದಾ ಸ್ಯಾಂ ಲೇಖಕೋಹ್ಯಹಮ್ ॥
ಓಮಿತ್ಯುಕ್ತ್ವಾ ಗಣೇಶೋಽಪಿ ಬಭೂವ ಕಿಲ ಲೇಖಕಃ ॥
ಗ್ರಂಥಗ್ರಂಥಿಂ ತದಾಚಕ್ರೇ ಮುನಿರ್ಗೂಢಂ ಕುತೂಹಲಾತ್॥
ಯಸ್ಮಿನ್ ಪ್ರತಿಜ್ಞಯಾ ಪ್ರಾಹ ಮುನಿರ್ದ್ವೈಪಾಯನಸ್ತ್ವಿದಮ್ ॥
ಅಷ್ಟೌಶ್ಲೋಕಸಹಸ್ರಾಣಿ ಅಷ್ಟೌಶ್ಲೋಕ ಶತಾನಿ ಚ।
ಅಹಂ ವೇದ್ಮಿ ಶುಕೋ ವೇತ್ತಿ ಸಂಜಯೋ ವೇತ್ತಿ ವಾ ನವಾ॥
ತಚ್ಛ್ಲೋಕಕೂಟಮದ್ಯಾಪಿ ಗ್ರಥಿತಂ ಸುದೃಢಂ ಮುನೇ।
ಭೇತ್ತುಂ ನ ಶಕ್ಯತೇಽರ್ಥಸ್ಯ ಗೂಢತ್ವಾತ್ ಪಶ್ನಿತಸ್ಯ ಚ॥
ಸರ್ವಜ್ಞೋ,,ಪಿ ಗಣೇಶೋ ಯತ್ ಕ್ಷಣಮಾಸ್ತೇ ವಿಚಾರಯನ್ ।
ತಾವಚ್ಚಕಾರ ವ್ಯಾಸೋ,,ಪಿ ಶ್ಲೋಕಾನನ್ಯಾನ್ ಬಹೂನಪಿ॥
ಷಷ್ಟಿಂ ಶತಸಹಸ್ರಾಣಿ ಚಕಾರಾನ್ಯಾಂ ಸ ಸಂಹಿತಾಮ್।
ತ್ರಿಂಶಚ್ಛತಸಹಸ್ರಂ ಚ ದೇವಲೋಕೇ ಪ್ರತಿಷ್ಠಿತಮ್॥
ಅಸ್ಮಿಂಸ್ತು ಮಾನುಷೇ ಲೋಕೇ ವೈಶಂಪಾಯನ ಉಕ್ತವಾನ್
ಶಿಶ್ಯೋ ವ್ಯಾಸಸ್ಯ ಧರ್ಮಾತ್ಮಾ ಸರ್ವವೇದವಿದಾಂ ವರಃ।
ಏವಂ ಶತಸಹಸ್ರಂ ತು ಮಯೋಕ್ತಂ ವೈ ನಿಬೋಧತ॥
ಎಂಬುದಾಗಿ. ಹೀಗೆ ವ್ಯಾಸ–ಗಣೇಶರ ಸಹಯೋಗದೊಂದಿಗೆ ಮಹಾಭಾರತದ ರಚನೆಯಾಯಿತು.

**ಮಹಾಭಾರತ ಕಾಲ –** ಶ್ರೀಮನ್ಮಹಾಭಾರತದ ಕಾಲದ ಬಗ್ಗೆ ಪರಿಶೋಧಕ ವಿದ್ವಾಂಸರು ಸುದೀರ್ಘವಾಗಿ ಚರ್ಚಿಸಿದರು. ಮಹಾಭಾರತದ ಯುದ್ಧದ ಕಾಲವೇನಾದರೂ ಸುಸ್ಪಷ್ಟವಾಗಿ ನಿಶ್ಚಿತವಾದರೆ ಈ ಗ್ರಂಥದ ಪೂರ್ವಾವಧಿಯನ್ನೂ ನಿಶ್ಚಯಿಸಬಹುದು.

**ಅಂತರೇ ಚೈವ ಸಂಪ್ರಾಪ್ತೇ ಕಲಿದ್ವಾಪರಯೋರಭೂತ್।**
**ಸಮಂತಪಂಚಕೇ ಯುದ್ಧಂ ಕುರುಪಾಂಡವಸೇನಯೋಃ।**

ಎಂಬುದಾಗಿ ಆದಿಪರ್ವದಲ್ಲಿ ಹೇಳಿರುವುದರಿಂದ ದ್ವಾಪರದ ಅಂತಿಮ ಹಾಗೂ ಕಲಿಯುಗದ ಆರಂಭದ ಸಮಯದಲ್ಲಿ ಮಹಾಭಾರತದ ಯುದ್ಧವು ನಡೆಯಿತು. ಈ ಕುರಿತಾಗಿ ವಿದ್ವಾಂಸರಲ್ಲಿ ಅಭಿಪ್ರಾಯ ಭೇದವಿದೆ. ಕ್ರಿಸ್ತಪೂರ್ವ 3101 ರಿಂದ ಕ್ರಿಸ್ತಪೂರ್ವ 1830ರವರೆಗಿನ ಕಾಲವನ್ನು ನಿಗದಿಪಡಿಸುತ್ತಾರೆ. ಒಟ್ಟಿನಲ್ಲಿ ಭಾರತಯುದ್ಧ ಕಾಲವು ಆದ್ಯಭಾರತದ ಪೂರ್ವಾವಧಿಯೆಂದು ನಿರ್ಣಯಿಸಬಹುದು. ಭಾರತಯುದ್ಧವಾದ ಬಹುಕಾಲಾನಂತರದಲ್ಲಿ ಸಂಪೂರ್ಣ ಮಹಾಭಾರತದ ಗ್ರಂಥದ ರಚನೆಯಾಯಿತೆಂದು ಹೇಳಬಹುದು.

**ಶ್ರೀಮನ್ಮಹಾಭಾರತದಲ್ಲಿ ಪುರುಷಾರ್ಥಗಳ ನಿರೂಪಣೆ:**

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳು ಚತುರ್ವಿಧ ಪುರುಷಾರ್ಥಗಳು.

1. "ಶ್ರುತಿಸ್ಮೃತ್ಯುದಿತಂ ಧರ್ಮಮನುತಿಷ್ಠನ್ ಹಿಮಾನವಃ।
   ಇಹ ಕೀರ್ತಿಮವಾಪ್ನೋತಿ ಪ್ರೇತ್ಯಚಾನುತ್ತಮಂ ಗತಿಮ್।"
2. "ಕದಾಚಿತ್ ಲಭತೇಜನ್ಮ ಮಾನುಷಂ ಪುಣ್ಯಸಂಶ್ರಯಾತ್।"
3. 'ನರತ್ತ್ವಂ ದುರ್ಲಭಂ ಲೋಕೇ।"
4. "ಜಂತೂನಾಂ ನರಜನ್ಮದುರ್ಲಭಮ್।"

ಇತ್ಯಾದಿ ವಾಕ್ಯಗಳು ಮನುಷ್ಯಜನ್ಮದ ಮಹತ್ವವನ್ನು ಸಾರುತ್ತವೆ. ಅತ್ಯಂತ ದುರ್ಲಭವಾದ ಮನುಷ್ಯಜನ್ಮ ಬಹು ಪುಣ್ಯಸಂಗ್ರಹದಿಂದ ಮಾತ್ರವೇ ದೊರೆಯುತ್ತದೆ. ಇಂತಹ ಜನ್ಮದ ಸಾರ್ಥಕತೆ ಧರ್ಮಾಚರಣೆಯಿಂದ ಮಾತ್ರ ಸಾಧ್ಯ. ಆದ್ದರಿಂದ ಮಾನವಜೀವನಕ್ಕೆ ಧರ್ಮಾಚರಣೆಯೇ ಮೂಲಾಧಾರವಾಗಿದ್ದು ಮೋಕ್ಷಪ್ರಾಪ್ತಿಯೇ ಪರಮೋದ್ದೇಶವಾಗಿದೆ. 'ಧರ್ಮೋರಕ್ಷತಿ ರಕ್ಷಿತಃ' ಎಂಬ ಮಾತು ಇದನ್ನು ದೃಢೀಕರಿಸುತ್ತದೆ.

**ಅರ್ಥ** – ಅರ್ಥವೆಂದರೆ ಮನುಷ್ಯರು ತಮ್ಮ ತಮ್ಮ ವೃತ್ತಿಗಳಿಗನುಗುಣವಾಗಿ ಸಂಪಾದಿಸುವ ದ್ರವ್ಯ. ಈ ಅರ್ಥವು ಧನ-ಧಾನ್ಯ-ಭೂಮಿ-ಪಶು ಇತ್ಯಾದಿರೂಪ ಸ್ಥಾವರ-ಜಂಗಮಾತ್ಮಿಕವಾದ ಸಂಪತ್ತು. ಶ್ರೀಮನ್ಮಹಾಭಾರತವು ಧರ್ಮಾನುಗುಣಿಯಾದ ಅರ್ಥನೀತಿಯನ್ನು ಪ್ರತಿಪಾದಿಸುತ್ತದೆ. ಅರ್ಥಸಂಪಾದನೋಪಾಯಗಳಲ್ಲಿ ವಾಣಿಜ್ಯವೂ ಒಂದು. ಋಗ್ವೇದೀಯ ಸೂಕ್ತಿಗಳಲ್ಲಿ ವಾಣಿಜ್ಯಕ್ಕೆ ಸಂಬಂಧಪಟ್ಟ ಉಲ್ಲೇಖಗಳು ಬಹಳವಾಗಿವೆ. ಉದಾಹರಣೆಯಾಗಿ ಕ್ರಯ-ವಿಕ್ರಯ ವಿಷಯದಲ್ಲಿ ಒಂದು ಪ್ರಸಂಗ ಹೀಗಿದೆ:

**ಭೂಯಸಾ ವಸ್ತ್ರಮಚರತ್ ಕನೀಯೋಽವಿಕ್ರೀತೋ ಅಕಾನಿಷಂ ಪುನರ್ಯನ್ ।**
**ಸಭೂಯಸಾ ಕನೀಯೋ ನಾರಿರೇಚೀದ್ ವಿನಾದಕ್ಷಾ ವಿದುಹನ್ತಿ ಪ್ರವಾಣಮ್ ॥**

ಶ್ರೀಮನ್ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ವಾಣಿಜ್ಯಕ್ಕೆ ಸಂಬಂಧಿಸಿದ ಪರಿಚಯಾತ್ಮಕವಾದ ಅಂಶಗಳಿವೆ. ಯುಧಿಷ್ಠಿರನು ರಾಜಧರ್ಮವನ್ನು ಕುರಿತು ಕೇಳಿದ ವಿವಿಧ ಪ್ರಶ್ನೆಗಳಿಗೆ ಉತ್ತರಿಸುತ್ತಾ ಭೀಷ್ಮಾಚಾರ್ಯರು ಕೋಶ ಮತ್ತು ಅದರ ಸಲುವಾಗಿ ಸಂಗ್ರಹಿಸಬೇಕಾದ ಸಂಪತ್ತನ್ನು ಕುರಿತು ಸುದೀರ್ಘವಾಗಿ ನಿರೂಪಿಸಿದ್ದಾರೆ. ಭೀಷ್ಮಮತಾನುಸಾರೇಣ ತೆರಿಗೆಯ ಮೂಲಕ ಕೋಶವನ್ನು ಹೆಚ್ಚಿಸಬೇಕು. ಹೇಗೆ ದುಂಬಿಗಳು ವಿವಿಧ ಪುಷ್ಪಗಳಿಂದ ಜೇನನ್ನು ಸಂಗ್ರಹಿಸುತ್ತವೆಯೋ ಹಾಗೆಯೇ ರಾಜನು ಪ್ರಜೆಗಳಿಂದ ಸ್ವಲ್ಪ ಪ್ರಮಾಣದ ತೆರಿಗೆಯನ್ನು (ಹಣವನ್ನು) ಸಂಗ್ರಹಿಸಬೇಕು. ಅದು ಹೇಗೆಂದರೆ

**"ಕೋಶಂ ಚ ಸತತಂ ರಕ್ಷ್ಯೋ ಯತ್ನಮಾಸ್ಥಾಯ ರಾಜಭಿಃ।**
**ಕೋಶಮೂಲಾ ಹಿ ರಾಜಾನಃ ಕೋಶೋ ವೃದ್ಧಿಕರೋ ಭವೇತ್॥"**

ಅರ್ಥನೀತಿಯಲ್ಲಿ ಧನಸಂಗ್ರಹವೇ ಮುಖ್ಯವಲ್ಲ, ಅದರ ವಿನಿಯೊಗವೂ ಅಷ್ಟೇ ಪ್ರಮುಖವಾದುದು. ದೇಶ–ಕಾಲ–ಪಾತ್ರರಲ್ಲಿ ಸದ್ವಿನಿಯೋಗವು ಸರ್ವಮಾನ್ಯವೂ, ಶ್ರೇಷ್ಠವೂ ಆಗುತ್ತದೆ ಎಂಬುದಾಗಿ ಶ್ರೀಮನ್ಮಹಾಭಾರತವು ವಿವೇಕಯುತವಾಗಿ ತಿಳಿಸುತ್ತದೆ. ಹೇಗೆಂದರೆ –

'ದೇಶೇ ಕಾಲೇ ಚ ಪಾತ್ರೇಚ ತದ್ದಾನಂ ಸಾತ್ವಿಕಂ ಮತಮ್ ॥ ಎಂಬುದಾಗಿ

'ಅರ್ಥವಿಲ್ಲದೆ ಜೀವನದಲ್ಲಿ ಏನೂ ಸಿದ್ಧಿಸುವುದಿಲ್ಲ' ಎಂಬುದನ್ನು ಶ್ರೀಮನ್ಮಹಾಭಾರತದ ಶಾಂತಿಪರ್ವದಲ್ಲಿ ಪ್ರತಿಪಾದಿಸಲಾಗಿದೆ. ಅದು ಈ ರೀತಿ ಇದೆ –

**'ಅರ್ಥೇಭ್ಯೋ ಹಿ ವಿವೃದ್ಧೇಭ್ಯಃ ಸಂವೃತೇಭ್ಯಸ್ತತಸ್ತತಃ ।**
**ಕ್ರಿಯಾಃ ಸರ್ವಾಃ ಪ್ರವರ್ತಂತೇ ಪರ್ವತೇಭ್ಯಃ ಇವಾಪಗಾಃ॥**
**ಅರ್ಥಾದ್ಧರ್ಮಶ್ಚ ಕಾಮಶ್ಚ ಸ್ವರ್ಗಶ್ಚೈವ ನರಾಧಿಪ ।**
**ಪ್ರಾಣಯಾತ್ರಾಪಿ ಲೋಕಸ್ಯ ವಿನಾಹ್ಯರ್ಥಂ ನ ಸಿಧ್ಯತಿ ॥**

ಹೀಗೆ ಅರ್ಥದ ಮಹತ್ವವನ್ನು ಶ್ರೀಮನ್ಮಹಾಭಾರತದಲ್ಲಿ ನಿರೂಪಿಸಲಾಗಿದೆ. ಪ್ರಸ್ತುತ ಪಠ್ಯಕ್ಕೆ ಸಂಬಂಧಿಸಿದಂತೆ ಕೆಳಗೆ ಸಂಗ್ರಹಿಸಲಾದ ಶ್ಲೋಕಗಳನ್ನು ನಿಗದಿಪಡಿಸಲಾಗಿದೆ. ಇದರ ಅಧ್ಯಯನದಿಂದ ಈಗ ತಲೆದೋರಿರುವ ಆರ್ಥಿಕ ಸಂಕಷ್ಟಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಬಹುದೆಂಬ ಆಶಾಭಾವನೆಯಿಂದ ಶ್ರದ್ಧಾಪೂರ್ವಕವಾಗಿ ಪ್ರಯತ್ನಿಸಲಾಗಿದೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇದನ್ನು ಸಾರ್ಥಕಪಡಿಸಿಕೊಂಡರೆ ಇಂತಹ ಪ್ರಯತ್ನಕ್ಕೆ ಫಲಸಿಕ್ಕಂತಾಗುತ್ತದೆ.

## ಮಹಾಭಾರತದಲ್ಲಿ ಅರ್ಥನೀತಿ.

ಮಾನವ ಜನ್ಮವನ್ನು ಸಾಧನಾ ಜನ್ಮ ಎಂದು ವಿಶ್ಲೇಷಿಸಲಾಗಿದೆ. 84 ಲಕ್ಷ ಜೀವರಾಶಿಗಳಲ್ಲಿ ಅತ್ಯಂತ ಶ್ರೇಷ್ಠವಾದುದು ಮಾನವ ಜನ್ಮ. ಆಹಾರ, ನಿದ್ರೆ, ಭಯ, ಮೈಥುನಾದಿಗುಣಗಳು ಎಲ್ಲ ಜೀವಿಗಳಿಗೂ ಸಮಾನ. ಆದರೆ ಮಾನವನಿಗೆ ವಿವೇಕ ಎಂಬ ಉತ್ತಮಗುಣವನ್ನು ಭಗವಂತನು ಪ್ರತ್ಯೇಕವಾಗಿ ಕಲ್ಪಿಸಿ ಅನುಗ್ರಹಿಸಿದ್ದಾನೆ. ಹಾಗಾಗಿ ವಿವೇಕಿಯಾದ ಮಾನವನು ತನ್ನ ಜೀವಿತಾವಧಿಯಲ್ಲಿ ಪುರುಷಾರ್ಥಗಳನ್ನು ಸಾಧಿಸದಿದ್ದರೆ ಜನ್ಮವು ವ್ಯರ್ಥವಾಗುವುದು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಗುರಿಗಳನ್ನು ಮುಟ್ಟುವುದೇ ಮಾನವಜನ್ಮದ ಮುಖ್ಯ ಉದ್ದೇಶ. ಮೊದಲನೇ ಪುರುಷಾರ್ಥವಾದ ಧರ್ಮವು ಕೈಗೊಳ್ಳುವ ಕಾರ್ಯಕ್ಕೆ ನೀತಿಸಂಹಿತೆಯನ್ನು ನಿರೂಪಿಸುತ್ತದೆ. ಅರ್ಥಕಾಮಗಳು ಮಾನವನ ಆಸೆ ಆಕಾಂಕ್ಷೆಗಳ ನಿರ್ವಹಣೆ ಹಾಗೂ ಸಾಧನಾ ಸಂಪತ್ತನ್ನು ಗಳಿಸುವ ಕ್ರಮವನ್ನು ತಿಳಿಸುತ್ತವೆ. ಧರ್ಮಮಾರ್ಗದಲ್ಲಿ ಸಾಧಿಸಿದ ಅರ್ಥಕಾಮಗಳು ಪರಮ ಪುರುಷಾರ್ಥವಾದ ಮೋಕ್ಷವನ್ನು ಸಾಧಿಸಲು ಅನುಕೂಲವಾಗುತ್ತವೆ. ಆದ್ದರಿಂದ ಮೋಕ್ಷ ಸಾಧನೆಗೆ ಅತ್ಯಂತ ಅಗತ್ಯವಾದ ದ್ವಿತೀಯ ಪುರುಷಾರ್ಥವಾದ ಅರ್ಥದ ಗಳಿಕೆ, ನಿರ್ವಹಣೆ ಮತ್ತು ವಿನಿಯೋಗಗಳನ್ನು ಕುರಿತು ನಿಶ್ಚಪ್ರಚವಾದ ನೀತಿ ನಿಯಮಗಳು ಅನಿವಾರ್ಯ ಮತ್ತು ಅಗತ್ಯವಾಗಿವೆ. ಇಂತಹ ನೀತಿನಿಯಮಗಳನ್ನು ನಿರೂಪಿಸುವ ಶಾಸ್ತ್ರವೇ 'ಅರ್ಥಶಾಸ್ತ್ರ' ದೇಶದ, ರಾಜ್ಯದ ಸ್ಥಿತಿಗತಿಗಳು ಉತ್ತಮ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸುತ್ತವೆ. ಶ್ರೀಮನ್ಮಹಾಭಾರತದಲ್ಲಿ ಅರ್ಥವನ್ನು ಕುರಿತ ನೀತಿ ನಿಯಮಗಳು ವಿಶೇಷವಾಗಿ ನಿರೂಪಿತವಾಗಿವೆ. 'कोशमूला हि राजानः अर्थागमो......... राजन् ಇತ್ಯಾದಿ ಸುಭಾಷಿತ ವಾಕ್ಯಗಳು ಅರ್ಥ ಸಂಪಾದನೆಯ ಮಾರ್ಗ ಮತ್ತು ಮಹತ್ವಗಳನ್ನು ಎತ್ತಿ ತೋರುತ್ತವೆ. क्षणशः कणशश्चैव विद्यामर्थं च साधयेत्, सवै गुणाः काञ्चनमाश्रयन्ति, ಇತ್ಯಾದಿ ಸುಭಾಷಿತ ವಾಕ್ಯಗಳು ಅರ್ಥಸಂಪಾದನೆಯ ಮಾರ್ಗ ಮತ್ತು ಮಹತ್ವಗಳನ್ನು ಎತ್ತಿ ತೋರುತ್ತವೆ. ಆದ್ದರಿಂದ ರಾಜನೀತಿಯ ಒಂದು ಭಾಗವೇ ಆಗಿರುವ ಅರ್ಥದ ಆದಾಯದ ಮೂಲಗಳು, ಕರ ಸಂಗ್ರಹವಿಧಾನಗಳು, ಅಗತ್ಯವಾದ ಸಂಪನ್ಮೂಲಗಳು, ಬೊಕ್ಕಸ-ಸಮೃದ್ಧಿಯ ಉಪಾಯಗಳು, ವಿತರಣೆ ಮತ್ತು ವಿನಿಯೋಗ ಇತ್ಯಾದಿ ಪ್ರಮುಖ ಅಂಶಗಳ ಕಡೆಗೆ ರಾಜ ಅಥವಾ ಆಡಳಿತ ಅತ್ಯಂತ ಜಾಗರೂಕತೆಯಿಂದ ನಡೆದುಕೊಳ್ಳಬೇಕು. ಇವೆಲ್ಲ ಅಂಶಗಳನ್ನೂ ಶ್ರೀಮನ್ಮಹಾಭಾರತವು ಮನಮುಟ್ಟುವಂತೆ ನಿರೂಪಿಸಿದೆ. ಇವು ಸಾರ್ವಕಾಲಿಕ ಹಾಗೂ ಸಾರ್ವದೇಶಿಕವಾಗಿ ಉಪಯುಕ್ತವಾಗಿವೆ.

१. कोशस्योपार्जनरतिः यमवैश्रवणोपमः ।
वेत्ता च दशवर्गस्य स्थानवृद्धिक्षयात्मनः ॥

२. आददीत बलिं चापि प्रजाभ्यः कुरुनन्दन ।
स षड्भागमिति प्राज्ञः तासामेवाभिगुप्तये ॥

३. फलं कर्म च निर्हेतु न कश्चित्संप्रवर्तते ।
यथा राजा च कर्ता च स्यातां कर्मणि भागिनौ ॥

४. नोच्छिन्द्यात् आत्मनो मूलं परेषां चापि तृष्णया ।
ईहाद्वाराणि संरुध्य राजा संप्रीतिदर्शनः ।

५. भृतो वत्सो जातबलः पीडां सहति भारत ।
न कर्म कुरुते वत्सो भृशं दुग्धो युधिष्ठिर ॥
६. प्राकारं भृत्यभरणं व्ययं सङ्ग्रामतो भयम् ।
योगक्षेमञ्च  सम्प्रेक्ष्य गोमिनः कारयेत्करम् ॥
७. उपेक्षिता हि नश्येत्भूः गोमिनोऽरण्यवासिनः ।
तस्मात्तेषु विशेषेण मृदुपूर्वं समाचरेत् ॥
८. सर्वत्र क्षेमचरणं सुलभं नाम गोमिषु ।
न ह्येतुः सदृशं किञ्चित् वरमस्ति युधिष्ठिर ॥
९. मधुदोहं दुहेद्राष्ट्रं भ्रमरा इव पादपम् ।
वत्सापेक्षी दुहेच्चैव स्तनांश्च न विकुट्टयेत् ॥
१०. जलौकावत् पिबेद्राष्ट्रं मृदुनैव नराधिपः ।
व्याघ्रीव च हरेत् पुत्रान् सन्दशेन्न च पीडयेत् ॥
११. यथा शल्यकवानाखुः पदं धुनयते सदा।
अतीक्ष्णेनाभ्युपायेन तथा राष्ट्रं समापिबेत् ॥
१२. अल्पेनाल्पेन देयेन वर्धापनं प्रदापयेत्।
ततो भूयस्ततो भूयः क्रमवृद्धिं समाचरेत् ।
१३. दमयन्निव दम्यानि शश्वद्भावं विवर्धयेत् ।
मृदुपूर्वं प्रयत्नेन पाशानभ्यवहारयेत् ॥
१४.  सकृत्  पाशावकीर्णास्ते न भविष्यन्ति दुर्दमाः ।
उचितेनैव भोक्तव्याः ते भविष्यन्ति यत्नतः ॥
१५. तस्मात्सर्वसमारम्भो दुर्लभः पुरुषं प्रति ।
यथा मुख्यान् सान्त्वयित्वा इतरो जनः॥
१६. न चास्थाने न चाकाले करांस्तेभ्यो निपातयेत् ।
आनुपूर्वेण सान्त्वेन यथाकालं यथाविधि ॥
१७. उपायान् प्रब्रवीन्येतान् न मे माया विवक्षिता।
अनुपायेन दमयन् प्रकोपयति वाजिनः ॥
१८. आपद्यैव तु याचन्ते येषां नास्ति परिग्रहः ।
दातव्यं धर्मतस्तेभ्यो अनुक्रोशाद्भयान्न तु ॥
१९. दण्ड्यास्ते च महाराज धनादानप्रयोजकाः ।
प्रयोगं कारयेयुस्तान्यथा बलिकरांस्तथा। ॥

२०. नरश्चेत् कृषिगोरक्षा वाणिज्यं चाप्यनुष्ठितः।
संशयं लभते किञ्चित् तेन राजा विगर्ह्यते ।
२१. कच्चित्ते वणिजो राष्ट्रे नोद्विजन्ति करार्दिताः ।
क्रीणन्तो बहुनाल्पेन कान्तारकृतविभ्रमाः ।
२२. कच्चित् कृषिकरा राष्ट्रं न जहत्यतिपीडिताः ।
ये वहन्ति धुरं राज्ञां ते भरन्तीतरानपि॥
२३. इतो दत्तानि जीवन्ति देवाः पितृगणास्तथा।
मानुषोरगरक्षांसि वयांसि पशवस्तथा ॥
२४. ग्रामस्याधिपतिः कार्यो दशग्राम्यस्तथापरः ।
द्विगुणायाः शतस्यैवं सहस्रस्य च कारयेत् ॥
२५. यानि ग्राम्याणि भोज्यानि ग्रामिकस्तान्युपाश्रियात् ।
दशपस्तेन भर्तव्यस्तेनापि द्विगुणाधिपः ॥
२६. ग्रामं ग्रामशताध्यक्षो भोक्तुमर्हति सत्कृतः ।
महान्तं भरतश्रेष्ठ सुस्फीतं जनसङ्कुलम् ॥
२७. शाखा नगरमर्हस्तु सहस्रपतिरुत्तमः ।
धान्यहैरण्यभोगेन भोक्तं राष्ट्रियसङ्गतः ॥
२८. नगरे नगरे वास्यात् एकः सर्वार्थचिन्तकः ।
उच्चैःस्थाने घोररूपो नक्षत्राणामिव ग्रहः ।
भवेत्स तान् परिक्रमेत् सर्वानेव सभासदः ॥
२९. तेषां वृत्तिः परिणयेत् कच्चिद्राष्ट्रेषु तच्चरः ।
जिघांसवः पापकामाः परस्वादायिवः शठाः ।
रक्षाभ्यधिकृता नाम तेभ्यो रक्षेदिमाः प्रजाः ।
३०. विक्रयक्रयमध्वानं भक्तञ्च सपरिच्छदम् ।
योगक्षेमञ्च सम्प्रेक्ष्य वणिजां कारयेत् करान् ॥
३१. उत्पत्तिं दानवृत्तिं च शिल्पं सम्प्रेक्ष्य चासकृत् ।
शिल्पं प्रति करानेवं शिल्पिनः प्रतिकारयेत् ॥
३२. उच्चावचकरा दाप्या महाराज्ञा युधिष्ठिर ।
यथा यथा न सीदेरन् तथा कुर्यान्महीपतिः ।
फलं कर्म च सम्प्रेक्ष्य ततः सर्वं प्रकल्पयेत् ॥

३३. नैतान्येकेन शक्यानि सातत्येनानुविक्षितुम् ।
तेषु सर्वं प्रतिष्ठाप्य राजा भुङ्क्ते चिरं महीम् ॥
३४. दातारं संविभक्तारं मार्दवोपगतं शुचिम् ।
असंत्यक्तमनुष्यञ्च तं जनाः कुर्वते नृपम् ॥
३५. यस्तु निःश्रेयसं श्रुत्वा ज्ञानं तत् प्रतिपद्यते ।
आत्मनो मतमुत्सृज्य तं लोकोऽनुविधीयते ॥
३६. योऽर्थकामस्य वचनं प्रातिकूल्यान्न मृष्यते ।
श्रुणोति प्रतिकूलानि सर्वदा विमना इव ।
अग्राम्यचरितां वृत्तिं यो न सेवेत नित्यदा ।
जितासनामजितानाञ्च क्षत्रधर्मादवैति सः ॥
३७. यस्य स्फीतो जनपदः सम्पन्नः प्रियराजकः ।
सन्तुष्टपुष्टसचिवो दृढमूलः स पार्थिवः ॥
३८. पौरजानपदा यस्य भूतेषु च दयालवः ।
सधना धान्यवन्तश्च दृढमूलः स पार्थिवः ॥
३९. भोगेषूदयमानस्य भूतेषु च दयावतः ।
वर्धते त्वरमाणस्य विषयो रक्षितात्मनः ॥
४०. न तु वध्यधनं तिष्ठेत् पिबेयुः ब्राह्मणाः पयाः ।
भुञ्जीरन्नप्यनदुहः क्षन्तव्यं वा तदा भवेत् ॥
४१. षड्दोषाः पुरुषेणेह हातव्या भूतिमिच्छता ।
निद्रा तन्द्रा भयं क्रोधः आलस्यं दीर्घसूत्रता ॥
४२. षडिमानि विनश्यन्ति मुहूर्तमनवेक्षणात् ।
गावः सेवा कृषिर्भार्या विद्या वृषलसङ्गतिः ॥
४३. आरोग्यमानृण्यमविप्रवासः ।
सद्भिर्मनुष्यैः सह सम्प्रयोगः।
स्वप्रत्यया वृत्तिरभीतवासः ।
षड्जीवलोकस्य सुखानि राजन् ॥
४४. यच्छक्यं ग्रसितुं ग्रस्यं ।
ग्रस्तं परिणमेच्च यत् ।
हितं च परिणामे यत् ।
तदाद्यं भूतिमिच्छता ॥

४५. वनस्पतेः अपक्वानि फलानि प्रचिनोति यः ।
न चाप्नोति रसं तेभ्यः बीजं चास्य विनश्यति ॥
४६. यस्तु पक्वमुपादत्ते काले परिणतं फलम् ।
फलाद्रसं स लभते बीजाच्चैव फलं पुनः ॥
४७. यथा मधु समादत्ते रक्षन् पुष्पाणि षट्पदः ।
तद्वदर्थान् मनुष्येभ्यो आदद्यात् अविहिंसया ॥
४८. किं नु मे स्यादिदं कृत्वा किं नु मे स्यादकुर्वतः ।
इति कर्माणि सञ्चिन्त्य कुर्याद्वा पुरुषो न वा ॥
४९. अनारभ्या भवन्त्यर्थाः केचिन्नित्यं तथागताः ।
कृतः पुरुषकारो हि भवेद्येषु निरर्थकः ॥
५०. सुपुष्पितः स्यादफलः फलितः स्याद्दुरारुहः ।
अपक्वः पक्वसंकाशो न शीर्येत कर्हिचित् ॥
५१. पुष्पं पुष्पं विचिन्वीत मूलच्छेदं न कारयेत् ।
मालाकार इवारामे न यथाङ्गारकारकः ।
५२. आददीत बलिं चापि प्रजाभ्यः कुरुनन्दन ।
स षड्भागमपि प्राज्ञः तासामेवाभिगुप्तये ।
५३. न कोशः शुद्धशौचेन न नृशंसेन जातुचित् ।
मध्यमं पदमास्थाय कोशसंग्रहणं चरेत् ॥
५४. कोशं च जनयेद्राजा निर्जलेभ्यो यथा जलम् ।
कालं प्राप्य अनुगृह्णीयादेष धर्मस्सनातनः ॥
५५. कोशश्च सततं रक्ष्यो यत्नमास्थाय राजभिः ।
कोशमूला हि राजानः कोशो वृद्धिकरो भवेत् ॥
५६. कर्मभूमिरियं राजन्निह वार्ता प्रशस्यते ।
कृषि–वाणिज्य गोरक्षं शिल्पानि विविधानि च ॥
५७. आपदर्थं च निर्यातं धनंत्विह विवर्धयेत् ।
राष्ट्रं च कोशमूलं स्यात् कोशो वेश्मगतस्तथा ॥
५८. धनिनः पूजयेन्नित्यं पानाच्छादनभोजनैः
वक्तव्याश्चानुगृण्हीध्वं प्रजाः सह मयेति वै ॥
५९. यथा मुख्यान् सान्त्वयित्वा भोक्तव्यो इतरे जनाः ।
कृषिगोरक्षवाणिज्यं यच्चान्यत् किञ्चिदीदृशम् ॥

६०. उत्पतिं दानवृत्तिं च शिल्पं सम्प्रेक्ष्य चासकृत् ।
शिल्पं प्रति करानेवं शिल्पिनः प्रति कारयेत् ॥
६१. उच्चावचकरा दाप्या महाराज्ञा युधिष्ठिर।
यथा यथा न सीदेरंस्तथा कुर्यान्महीपतिः ।

# ಕನ್ನಡಾನುವಾದ

1. ರಾಜನು ಬೊಕ್ಕಸವನ್ನು ತುಂಬಿಸುವುದಲ್ಲಿ ನಿರತನಾಗಿರಬೇಕು, ನ್ಯಾಯದಾನದಲ್ಲಿ ಧರ್ಮರಾಜನಂತೆಯೂ, ಕೋಶಸಂಗ್ರಹದಲ್ಲಿ ಕುಬೇರನಂತೆಯೂ ಇರಬೇಕು. ತನ್ನ ಅಸ್ತಿತ್ವ, ವೃದ್ಧಿ ಮತ್ತು ಕ್ಷಯಗಳಿಗೆ ಕಾರಣವಾದ ದಶವರ್ಗಗಳನ್ನು ಚೆನ್ನಾಗಿ ಅರಿತಿರಬೇಕು.
2. ಎಲೈ ಕುರನಂದನ! ಬುದ್ಧಿವಂತನಾದ ರಾಜನು ಪ್ರಜೆಗಳ ಸಂರಕ್ಷಣೆಯ ಸಲುವಾಗಿ ಅವರ ಆದಾಯದ ಆರನೇ ಒಂದು (1/6) ಭಾಗವನ್ನು ಅವರಿಂದ ತೆರಿಗೆ ರೂಪದಲ್ಲಿ ಪಡೆಯಬೇಕು.
3. ಕರ್ಮಕ್ಕೆ ಅನುಗುಣವಾದ ಫಲವಿಲ್ಲದಿದ್ದರೆ ಯಾವೊಬ್ಬನೂ ಯಾವುದೇ ಕೆಲಸವನ್ನು ಮಾಡಬಯಸುವುದಿಲ್ಲ. ಆದ್ದರಿಂದ (ಕೃಷಿ, ವಾಣಿಜ್ಯಾದಿ) ಕರ್ಮಗಳಲ್ಲಿ ತೊಡಗಿಸಿಕೊಂಡವನಿಗೂ ಮತ್ತು ರಾಜನಿಗೂ ಕರ್ಮಫಲದ ಲಾಭ ಸಿಗುವಂತೆ ವ್ಯವಹರಿಸಬೇಕು, ಹಾಗೂ ಅವುಗಳನ್ನು ಪರಿಶೀಲಿಸಿ ಪ್ರಜೆಗಳ ಮೇಲೆ ತೆರಿಗೆಯನ್ನು ವಿಧಿಸಬೇಕು.
4. ಕರವನ್ನೇ ತೆಗೆದುಕೊಳ್ಳದೆ ತನ್ನನ್ನು ತಾನೇ ಹಾಳು ಮಾಡಿಕೊಳ್ಳಬಾರದು. ಧನಲಾಭದ ಆಶೆಯಿಂದ ಕೃಷಿ-ವಾಣಿಜ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಆದಾಯಮೂಲವನ್ನೂ ನಾಶಗೊಳಿಸಬಾರದು. ದುರಾಶೆಯ ದ್ವಾರವನ್ನು ಮುಚ್ಚಿ ಯಥೋಚಿತವಾದ ತೆರಿಗೆಗಳನ್ನು ಮಾತ್ರ ವಿಧಿಸಬೇಕು. ಇಂತಹ ಆಡಳಿತದಿಂದ ರಾಜನು ಪ್ರಜೆಗಳಿಗೆ ಪ್ರಿಯದರ್ಶನನಾಗುತ್ತಾನೆ. ಪ್ರಜೆಗಳ ಆದಾಯವನ್ನು ಅತಿಯಾಗಿ ಕಬಳಿಸುವ ಕುಖ್ಯಾತಿಯನ್ನು ಪಡೆದ ರಾಜನನ್ನು ಪ್ರಜೆಗಳು ದ್ವೇಷಿಸುತ್ತಾರೆ.
5. ಎಲೈ ಯುಧಿಷ್ಠಿರ! ತನಗೆ ಬೇಕಾದಷ್ಟು ಹಾಲನ್ನು ಕುಡಿದ ಕರುವ ಭಾರವನ್ನು ಹೊರಲು ಸಮರ್ಥವಾಗುತ್ತದೆ. ಕರುವಿಗೂ ಬಿಡದೆ ಹಾಲನ್ನು ಕರೆದರೆ ಅದು ಯಾವ ಕೆಲಸವನ್ನೂ ಮಾಡಲಾರದು.
6. ನಗರ ರಕ್ಷಣೆಗಾಗಿ ನಿರ್ಮಿಸಿರುವ ಪ್ರಾಕಾರ, ಸೇವಕರ ಮತ್ತು ಸೈನಿಕರ ವೇತನ, ಯುದ್ಧಭಯ ನಿವಾರಣೆಗಾಗಿ ವ್ಯಯಿಸುವ ಧನ ಮತ್ತು ಪ್ರಜೆಗಳ ಯೋಗಕ್ಷೇಮಕ್ಕಾಗಿ ಬೇಕಾಗುವಷ್ಟು ಹಣ ಇವುಗಳೆಲ್ಲವನ್ನೂ ಪ್ರಕಟಿಸಿ ಶ್ರೀಮಂತರ ಗಮನಕ್ಕೆ ತಂದು ಅವರಿಂದ ತೆರಿಗೆಯನ್ನು ಪಡೆಯಬೇಕು.
7. ಒಂದು ವೇಳೆ ರಾಜನು ವೈಶ್ಯರ (ವ್ಯಾಪಾರಿಗಳ) ಲಾಭ-ನಷ್ಟಗಳನ್ನು ಪರಿಗಣಿಸದೆ ಅವರಿಂದ ಹೆಚ್ಚು ತೆರಿಗೆಯನ್ನು ವಿಧಿಸಿ ಅವರನ್ನು ಪೀಡಿಸಿದರೆ ಅಂತಹವರು ತೊಂದರೆಗೊಳಗಾಗಬಹುದು. ಆದ್ದರಿಂದ ವ್ಯಾಪಾರಿಗಳ ವಿಷಯದಲ್ಲಿ ಮೃದುವಾಗಿ ವ್ಯವಹರಿಸಬೇಕು.
8. ಎಲೈ ಯುಧಿಷ್ಠಿರ! ವೈಶ್ಯರು ದೇಶ-ವಿದೇಶಗಳಲ್ಲಿ ಯಾವ ತೊಂದರೆಯೂ ಇಲ್ಲದೆ ನಿರಾತಂಕವಾಗಿ ಸಂಚರಿಸಲು ಅವಕಾಶವಾಗುವಂತೆ ವ್ಯವಸ್ಥೆಯನ್ನು ಮಾಡಬೇಕು. ರಾಜನಿಗೆ ಇದಕ್ಕಿಂತ ಶ್ರೇಷ್ಠವಾದ ಕಾರ್ಯ ಮತ್ತೊಂದಿಲ್ಲ.
9. ಹೇಗೆ ದುಂಬಿಗಳು ಲತಾಕುಂಜಗಳಲ್ಲಿನ ಹೂಗಳ ಮಕರಂದವನ್ನು ಪುಷ್ಪಗಳಿಗೆ ಹಾನಿಯಾಗದಂತೆ ಹೀರಿಕೊಳ್ಳುವಂತೆ, ಗೋಪಾಲಕನು ಕರುಗಳಿಗೆ ಬೇಕಾಗುವಷ್ಟು ಹಾಲನ್ನು ಬಿಟ್ಟು ಕೆಚ್ಚಲವನ್ನು ಘಾಸಿಗೊಳಿಸದೆ ಹಾಲುಕರೆಯುವಂತೆ ರಾಜನೂ ಸಹ ಪ್ರಜೆಗಳು ಅಭಿವೃದ್ಧಿಯಾಗಲು ಅನುವುಮಾಡಿಕೊಟ್ಟು ಅವರಿಗೆ ಹೊರೆಯಾಗದಂತೆ ಕರವನ್ನು ವಿಧಿಸಬೇಕು.

10. ಜಿಗಣೆಯು ಮನುಷ್ಯನಿಗೆ ತಿಳಿಯದಂತೆ ಅವನ ರಕ್ತವನ್ನು ಹೀರುವಂತೆ ರಾಜನು ಪ್ರಜೆಗಳ ಗಮನಕ್ಕೆ ಬಾರದಂತೆ ಅವರಿಂದ ತೆರಿಗೆಯನ್ನು ಸ್ವೀಕರಿಸಬೇಕು. ಹೆಣ್ಣು ಹುಲಿಯು ತನ್ನ ಮರಿಗಳನ್ನು ಕಚ್ಚಿದ್ದರೂ ಯಾವುದೇ ಗಾಯವಾಗದಂತೆ ಕೊಂಡೊಯ್ಯುತ್ತದೆಯೋ ಹಾಗೆಯೇ ರಾಜನು ಪ್ರಜೆಗಳಿಗೆ ಯಾವುದೇ ತೊಂದರೆಯಾಗದಂತೆ ಕರವನ್ನು ಸಂಗ್ರಹಿಸಬೇಕು.
11. ಮೊನಚಾದ ಹಲ್ಲುಳ್ಳ ಇಲಿಯು ಮನುಷ್ಯರ ಕಾಲನ್ನು ಕಚ್ಚುವಂತೆ (ಅತಿಯಾಗಿ ನೋವಾಗದಂತೆ) ರಾಜನು ಸೂಕ್ಷ್ಮವಾದ ಉಪಾಯಗಳಿಂದ ರಾಜಾದಾಯವನ್ನು ಸಂಗ್ರಹಿಸಬೇಕು.
12. ರಾಜನು ಮೊದಮೊದಲು ಅಲ್ಪಪ್ರಮಾಣದ ತೆರಿಗೆಯಿಂದಲೇ ತೃಪ್ತನಾಗಬೇಕು. ಕಾಲಕ್ರಮೇಣ ತೆರಿಗೆಯ ಪ್ರಮಾಣವನ್ನು ಸ್ವಲ್ಪ ಸ್ವಲ್ಪ ಹೆಚ್ಚಿಸಬೇಕು.
13. (ಹೋರಿ ಮೊದಲಾದ) ಭಾರವನ್ನು ಹೊರುವ ಪ್ರಾಣಿಗಳ ಮೇಲೆ ಅನುಕ್ರಮವಾಗಿ ಭಾರದ ಹೊರೆಯನ್ನು ಹೆಚ್ಚಿಸುವಂತೆ ಪ್ರಜೆಗಳ ಮೇಲಿನ ಕರವನ್ನು ಹಂತಹಂತವಾಗಿ ಹೆಚ್ಚಿಸಬೇಕು.
14. ಒಂದೇ ಬಾರಿಗೆ ಅಧಿಕ ತೆರಿಗೆಯ ಪಾಶವನ್ನು ಪ್ರಜೆಗಳ ಕುತ್ತಿಗೆಗೆ ಬಿಗಿದರೆ ಅವರು ಬದುಕುಳಿಯಲಾರರು. ಒಂದೇ ಬಾರಿಗೆ ಬಗ್ಗಿಸಲೂ ಆಗುವುದಿಲ್ಲ. ಆದ್ದರಿಂದ ಸ್ವಲ್ಪ ಸ್ವಲ್ಪ ತೆರಿಗೆಯನ್ನು ಹೆಚ್ಚಿಸಬೇಕು.
15. ಎಲ್ಲ ಪ್ರಜೆಗಳನ್ನೂ ಒಂದೇ ಬಾರಿಗೆ ತೆರಿಗೆಗೆ ಒಳಪಡಿಸುವುದು ಸುಲಭವಲ್ಲ. ಆದ್ದರಿಂದ ಮುಖ್ಯವಾದವರಿಂದ ತೆರಿಗೆಯನ್ನು ಸಂಗ್ರಹಿಸುತ್ತಾ ಹೋದಂತೆ ಇತರರೂ ಅವರನ್ನು ಅನುಸರಿಸುತ್ತಾರೆ.
16. ಕಾರಣವಿಲ್ಲದೆ ಅಕಾಲದಲ್ಲಿ ಜನರ ಮೇಲೆ ತೆರಿಗೆಯನ್ನು ವಿಧಿಸಬಾರದು. ಸಂದರ್ಭಾನುಸಾರ ತೆರಿಗೆ ವಿಧಿಸುವ ಕಾರಣವನ್ನು ಪ್ರಜೆಗಳಿಗೆ ತಿಳಿಸಿ ಅವರನ್ನು ಸಂತೈಸಿದ ನಂತರ ನಿಯಮಾನುಸಾರ ತೆರಿಗೆಯನ್ನು ವಿಧಿಸಬೇಕು.
17. ಕರಸಂಗ್ರಹ ಮಾಡಲು ಈ ಉತ್ತಮವಾದ ಉಪಾಯಗಳನ್ನು ಸೂಚಿಸುತ್ತಿದ್ದೇನೆ. ಹಾಗೆಂದ ಮಾತ್ರಕ್ಕೆ ಪ್ರಜೆಗಳನ್ನೂ ವಂಚಿಸಬೇಕೆಂದು ನನ್ನ ಉದ್ದೇಶವಲ್ಲ. ಉಪಾಯವಿಲ್ಲದೆ ಕುದುರೆಗಳನ್ನು ಏರಲು ಹೋದರೆ ಕುದುರೆಗಳೂ ಸಹ ಕೋಪಗೊಳ್ಳುತ್ತವೆ.
18. ಆಪತ್ಕಾಲದಲ್ಲಿ ಧನ–ಧಾನ್ಯ ಸಂಗ್ರಹವಿಲ್ಲದವರು ಅನನ್ಯಗತಿಕರಾಗಿ ಯಾಚಿಸುತ್ತಾರೆ. ಅಂತಹವರಿಗೆ ಆಪದ್ಧರ್ಮದಂತೆ ಅನುಕಂಪದಿಂದ ಧನಸಹಾಯ ಮಾಡಬೇಕು.
19. ರಾಜನಿಂದ ಕರವಸೂಲಿಗೆ ನಿಯುಕ್ತನಾದ ಅಧಿಕಾರಿಯು ಅಗತ್ಯಕ್ಕಿಂತ ಹೆಚ್ಚಿನ ತೆರಿಗೆಯನ್ನು ಪ್ರಜೆಗಳಿಂದ ಸ್ವೀಕರಿಸಿದರೆ ಅಂತಹವನನ್ನು ಶಿಕ್ಷಿಸಬೇಕು.
20. ಕೃಷಿ–ಗೋರಕ್ಷಣೆ–ವಾಣಿಜ್ಯ ಮೊದಲಾದ ಉದ್ಯೋಗಗಳಲ್ಲಿ ನಿರತರಾದ ಪ್ರಜೆಗಳೇನಾದರೂ ಕಳ್ಳಕಾಕರ ಉಪಟಳದಿಂದಾಗಿ ಸಂಕಷ್ಟಕ್ಕೆ ಸಿಲುಕಿದರೆ ಅಂತಹವರಿಗೆ ಸೂಕ್ತರಕ್ಷಣೆಯನ್ನು ಒದಗಿಸದ ರಾಜನು ನಿಂದನಾರ್ಹನಾಗುತ್ತಾನೆ.
21. ಹೆಚ್ಚು ಅಥವಾ ಕಡಿಮೆ ಬೆಲೆಗೆ ಪದಾರ್ಥಗಳನ್ನು ಕೊಳ್ಳುವ ಹಾಗೂ ಕೊಂಡ ಪದಾರ್ಥಗಳನ್ನು ಸಾಗಿಸುವುದಕ್ಕೋಸ್ಕರ ಕಾಡುಮೇಡುಗಳಲ್ಲಿ ಅಲೆದಾಡುವ ವ್ಯಾಪಾರವರ್ಗದವರು ನಿನ್ನ ರಾಷ್ಟ್ರದಲ್ಲಿ ಕರಭಾರದಿಂದ ಪೀಡಿತರಾಗಿ ಉದ್ವಿಗ್ನರಾಗುತ್ತಿಲ್ಲವಷ್ಟೇ?
22. ಯಾವೊಬ್ಬ ಕೃಷಿಕರನ್ನು ಅಧಿಕಾರಿಗಳಿಂದ ಪೀಡಿತರಾಗಿ ರಾಜ್ಯವನ್ನು ಬಿಟ್ಟು ಹೊಗುತ್ತಿಲ್ಲ ತಾನೆ? ಹಾಗೇನಾದರೂ ಕೃಷಿಕರು ರಾಜ್ಯವನ್ನು ಬಿಟ್ಟುಹೋದರೆ ರಾಜನಿಗೆ ಆಪತ್ತು ತಪ್ಪಿದ್ದಲ್ಲ ಏಕೆಂದರೆ ರಾಜರ ಭಾರತವನ್ನು ಭರಿಸುವವರು ಕೃಷಿಕರೇ ಆಗಿರುತ್ತಾರೆ.

23. ರೈತರು (ಕೊಡುವ) ಧಾನ್ಯಾದಿಗಳಿಂದಲೇ ದೇವತೆಗಳು, ಪಿತೃಗಳು, ಮಾನವರು, ಸರ್ಪಗಳು, ರಾಕ್ಷಸರು, ಪಶುಪಕ್ಷಿಗಳೆಲ್ಲವೂ ಜೀವನವನ್ನು ನಡೆಸುತ್ತವೆ.

24. ಒಂದು ಗ್ರಾಮಕ್ಕೆ ಒಬ್ಬನೇ (ಅಧಿಕಾರಿ) ಬೇಕು. ಹತ್ತು ಗ್ರಾಮಗಳನ್ನು ಸೇರಿಸಿ ಅದಕ್ಕೊಬ್ಬ ಅಧಿಕಾರಿ, ಇಪ್ಪತ್ತು ಗ್ರಾಮಗಳಿಗೆ ಮತ್ತೊಬ್ಬ ಅಧಿಕಾರಿ, ನೂರು ಗ್ರಾಮಗಳಿಗೆ ಇನ್ನೊಬ್ಬ ಅಧಿಕಾರಿಯಿರಬೇಕು. ಹಾಗೆಯೇ ಸಾವಿರ ಗ್ರಾಮಗಳಿಗೊಬ್ಬ ಅಧಿಕಾರಿಯಿರಬೆಕು. 25 ಏಕಗ್ರಾಮಾಧಿಪತಿಯು ತಾನು ತನ್ನ ಗ್ರಾಮದಲ್ಲಿ ಸಂಗ್ರಹಿಸಿದ ಕಂದಾಯ, ಕೃಷಿ ಉತ್ಪನ್ನಗಳ ನಿರ್ದಿಷ್ಠಾಂಶವನ್ನು ಹೊರತು ಪಡಿಸಿ ಉಳಿದ ಭಾಗವನ್ನು ದಶಗ್ರಾಮಾಧಿಪತಿಗೆ ಕೊಡಬೇಕು. ದಶಗ್ರಾಮಾಧಿಪತಿಯು ಅದರ ನಿರ್ದಿಷ್ಟಾಂಶವನ್ನು ತೆಗೆದಿರಿಸಿ ಉಳಿದ ಭಾಗವನ್ನು ವಿಂಶತಿಗ್ರಾಮಾಧಿಪತಿಗೆ ಕೊಡಬೇಕು. ವಿಂಶತಿ ಗ್ರಾಮಾಧಿಪತಿಯೂ ಸಹ ಒಂದು ನಿರ್ದಿಷ್ಟಾಂಶವನ್ನು ಉಳಿಸಿಕೊಂಡು ಶತಗ್ರಾಮಾಧಿಪತಿಗೆ ಒಪ್ಪಿಸಬೇಕು.

25. ಏಕಗ್ರಾಮಾಧಿಪತಿಯು ತಾನು ತನ್ನ ಗ್ರಾಮದಲ್ಲಿ ಗ್ರಾಮದಲ್ಲಿ ಸಂಗ್ರಹಿಸಿದ ಕಂದಾಯ, ಕೃಷ್ಯುತ್ಪನ್ನಗಳ ನಿರ್ದಿಷ್ಟಾಂಶವನ್ನು ಹೊರತು ಪಡಿಸಿ ಉಳಿದ ಭಾಗವನ್ನು ದಶಗ್ರಾಮಾಧಿಪತಿಗೆ ಕೊಡಬೇಕು. ದಶಗ್ರಾಮಾಧಿಪತಿಯು ಅದರ ನಿರ್ದಿಷ್ಟಾಂಶವನ್ನು ತೆಗೆದಿರಿಸಿ ಉಳಿದ ಭಾಗವನ್ನು ವಿಂಶತಿ ಗ್ರಾಮಾಧಿಪತಿಗೆ ಕೊಡಬೇಕು. ವಿಂಶತಿ ಗ್ರಾಮಾಧಿಪತಿಯೂ ಸಹ ಒಂದು ನಿರ್ದಿಷ್ಟಾಂಶವನ್ನು ಉಳಿಸಿಕೊಂಡು ಶತಗ್ರಾಮಾಧಿಪತಿಗೆ ಒಪ್ಪಿಸಬೇಕು. ಶತಗ್ರಾಮಾಧಿಪತಿಯು ತನ್ನ ನಿರ್ದಿಷ್ಟಾಂಶವನ್ನು (ಇಟ್ಟುಕೊಂಡು) ಉಳಿಸಿಕೊಂಡು ಸಹಸ್ರ ಗ್ರಾಮಾಧಿಪತಿಗೆ ಕೊಡಬೇಕು. ಸಹಸ್ರಗ್ರಾಮಾಧಿಪತಿಯು ತನ್ನ ನಿರ್ದಿಷ್ಟಾಂಶವನ್ನು ಉಳಿಸಿಕೊಂಡು ರಾಜನಿಗೆ ಒಪ್ಪಿಸಬೇಕು.

26. ಎಲೈ ಭರತವರ್ಷಭ! ಸತ್ಕೃತನಾದ ಶತಗ್ರಾಮಾಧ್ಯಕ್ಷನು ಧನ–ಧಾನ್ಯ ಸಮೃದ್ಧಿಯಿಂದ ಜನಜಂಗುಳಿಯಿಂದ ಕೂಡಿರುವ ವಿಶಾಲವಾದ ಒಂದು ಗ್ರಾಮದ ಆದಾಯವನ್ನು ಸಂಪೂರ್ಣವಾಗಿ ಪಡೆದುಕೊಳ್ಳಲು ಅರ್ಹನಾಗುತ್ತಾನೆ. ಹೀಗೆ ಸಮೃದ್ಧವಾದ ರಾಜ್ಯವು ಬಹುಜನರ ಅಧಿಕಾರಕ್ಕೆ ಒಳಪಟ್ಟು ರಕ್ಷಿಸಲ್ಪಡಬೇಕು.

27. ಶ್ರೇಷ್ಠನಾದ ಸಹಸ್ರಗ್ರಾಮಾಧಿಪತಿಯು ಉಪಶಾಖೆಗಳ (ಉಪನಗರಗಳ) ಆದಾಯವನ್ನು ಪಡೆಯಲು ಅರ್ಹನಾಗುತ್ತಾನೆ. ಆಯಾಯಾ ಶಾಖಾನಗರದಲ್ಲಿ ಯಾವ ಧಾನ್ಯ-ಹಿರಣ್ಯಾದಿಗಳು ದೊರಕುತ್ತವೆಯೋ ಅವುಗಳನ್ನು ಸಹಸ್ರಗ್ರಾಮಾಧಿಪತಿಯು ರಾಷ್ಟ್ರೀಯ ಅಂದರೆ ರಾಜಸಂಬಂಧಿಯೊಂದಿಗೆ ಕೂಡಿಕೊಂಡು ಉಪಭೋಗಿಸಬಹುದು.

28. ಪ್ರತಿಯೊಂದು ನಗರಕ್ಕೂ ಸರ್ವಾರ್ಥಚಿಂತಕನಾದ ಒಬ್ಬ ಅಧಿಕಾರಿಯು ಇರಲೇಬೇಕು. ನಕ್ಷತ್ರಗಳಿಗಿಂತ ಎತ್ತರದಲ್ಲಿ ಗ್ರಹವೊಂದು ಇರುವಂತೆ ಆ ಅಧಿಕಾರಿಯು ಎಲ್ಲರಿಗಿಂತಲೂ ಉನ್ನತಸ್ಥಾನದಲ್ಲಿದ್ದು, ಉಳಿದೆಲ್ಲಾ ಸಭಾಸದರಿಗೂ ನಿಕಟವರ್ತಿಯಾಗಿದ್ದು ಅವರು ಮಾಡುವ ಕಾರ್ಯಗಳನ್ನು ಪರಿಶೀಲಿಸುತ್ತಿರಬೇಕು.

29. ಸಭಾಸದರು ಮಾಡುವ ಕಾರ್ಯಗಳನ್ನೂ, ಅವರ ಮನೋಭಾವಗಳನ್ನು ರಾಷ್ಟ್ರಾದ್ಯಂತ ಪ್ರವಾಸ ಮಾಡುವ ಗೂಢಚಾರನು ತಿಳಿದು, ಸರ್ವಾರ್ಥ ಚಿಂತಕನಾದ ಅಧಿಕಾರಿಗೆ ತಿಳಿಸಬೇಕು. ರಕ್ಷಣಾ ಕಾರ್ಯದಲ್ಲಿ ನಿಯುಕ್ತರಾದ ಅಧಿಕಾರಿಗಳಲ್ಲಿ ಕೆಲವರು ಸಾಮಾನ್ಯವಾಗಿ ಹಿಂಸಾತ್ಮಕ ಸ್ವಭಾವದವರಿರುತ್ತಾರೆ. ಇಂತಹವರು ಪಾಪಕಾರ್ಯ ಮಾಡುವುದರಲ್ಲಿಯೇ ಇಚ್ಛೆಯುಳ್ಳವರಾಗಿ ಪರಸಂಪತ್ತನ್ನು ಅಪಹರಿಸುವುದರಲ್ಲಿಯೇ ಆಸಕ್ತರಾಗಿ ಮೋಸ ಮಾಡುತ್ತಾರೆ. ಸರ್ವಾರ್ಥ ಚಿಂತಕನು ಅಂತಹ ರಕ್ಷಣಾಧಿಕಾರಿಗಳಿಂದ ಪ್ರಜೆಗಳನ್ನು ರಕ್ಷಿಸಬೇಕು.

30. ವಸ್ತುಗಳನ್ನು ಕೊಳ್ಳುವ ಮತ್ತು ಮಾರುವ ಅವುಗಳನ್ನು ತರಿಸಿಕೊಳ್ಳಲು ತಗಲುವ ಖರ್ಚು ವೆಚ್ಚಗಳೆಲ್ಲವನ್ನು ಪರಿಶೀಲಿಸಿ ವರ್ತಕರಿಗೆ ತೆರಿಗೆಯನ್ನು ವಿಧಿಸಬೇಕು.
31. ಪದಾರ್ಥಗಳನ್ನು ತಯಾರಿಸಲು ತಗಲುವ ಖರ್ಚು, ಅವುಗಳನ್ನು ಮಾರಾಟ ಮಾಡಿದ ನಂತರ ಬರುವ ಲಾಭ, ಸಿದ್ಧವಸ್ತುಗಳಲ್ಲಿನ ಉತ್ತಮ, ಮಧ್ಯಮ ಮತ್ತು ಅಧಮ ಗುಣಗಳೆಲ್ಲವನ್ನು ಪರಿಶೀಲಿಸಿ ಪದಾರ್ಥಗಳ ಮೇಲೆ ತೆರಿಗೆಯನ್ನು ವಿಧಿಸಬೇಕು.
32. ಎಲ್ಲಾ ಪದಾರ್ಥಗಳಿಗೂ ಒಂದೇ ತೆರನಾದ ಕರವನ್ನು ವಿಧಿಸಬಾರದು. ಕಡಿಮೆ ಆದಾಯದವರಿಗೆ ಅಲ್ಪ ತೆರಿಗೆ, ಹೆಚ್ಚು ಆದಾಯದವರಿಗೆ ಅಧಿಕ ತೆರಿಗೆಯನ್ನು ವಿಧಿಸಬೇಕು. ಕರಭಾರದಿಂದ ಪ್ರಜೆಗಳು ವಿನಾಶವಾಗದಂತೆ ರಾಜನು ನೋಡಿಕೊಳ್ಳಬೇಕು. ವಸ್ತುವಿನ ನಿರ್ಮಾಣವೆಚ್ಚ ಹಾಗೂ ಅವಧಿ ಮತ್ತು ಲಾಭಗಳನ್ನು ಗಮನಿಸಿ ತೆರಿಗೆಯನ್ನು ವಿಧಿಸಬೇಕು.
33. ರಾಜನೊಬ್ಬನೇ ಎಲ್ಲಾ ವ್ಯವಹಾರಗಳನ್ನೂ ನಿರಂತರವಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಯೋಗ್ಯ ಅಧಿಕಾರಿಗಳನ್ನು ನೇಮಿಸಿ ಪ್ರಾಮಾಣಿಕತೆಯಿಂದ ವ್ಯವಹಾರವನ್ನು ನಿರ್ವಹಿಸುವಂತೆ ನೋಡಿಕೊಂಡರೆ ರಾಜನು ಬಹುಕಾಲದವರೆಗೆ ರಾಜ್ಯಸುಖವನ್ನನುಭವಿಸುತ್ತಾನೆ.
34. ದಾನಶೀಲನಾಗಿರುವ, ಎಲ್ಲರಿಗೂ ಅವಶ್ಯವಿರುವ ವಸ್ತುಗಳನ್ನು ಸರಿಯಾಗಿ ವಿಂಗಡಿಸಿ ವಿತರಿಸುವ ಮೃದುಸ್ವಭಾವದ ಶುದ್ಧವಾದ ಆಚಾರ ವ್ಯವಹಾರಗಳುಳ್ಳ ಎಂತಹ ಕಠಿಣ ಪರಿಸ್ಥಿತಿಗಳಲ್ಲಿಯೂ ಪ್ರಜೆಗಳ ಹಿತವನ್ನು ಕಡೆಗಣಿಸದ ರಾಜನನ್ನು ಜನರು ಆರಿಸಿ ಆದರಿಸುತ್ತಾರೆ.
35. ಒಳ್ಳೆಯ ಉಪದೇಶವನ್ನು ಕೇಳಿ, ತನ್ನ ಅಭಿಪ್ರಾಯವೇ ಸರಿ ಎಂಬ ದುರಾಗ್ರವನ್ನು ತ್ಯಜಿಸಿ ನಿಜವಾದ ಜಿಜ್ಞಾಸುವನ್ನು ಲೋಕವು ಆದರಿಸುತ್ತದೆ.
36. ತನ್ನ ಅಭಿಪ್ರಾಯಕ್ಕೆ ವಿರುದ್ಧವಾಗಿದೆಯೆಂಬ ಕಾರಣಕ್ಕೆ ಅರ್ಥಸಿದ್ಧಿಯನ್ನು ಅಪೇಕ್ಷಿಸುವ ಗೆಳೆಯನ ಮಾತುಗಳನ್ನು ಕೇಳುವ, ಯಾವಾಗಲೂ ಅನ್ಯಮನಸ್ಕನಂತಿರುವ (ಕರ್ತವ್ಯವಿಮುಖನಾದ), ವಿದ್ವಾಂಸರು ಪುರಸ್ಕರಿಸಿ ಅನುಸರಿಸುವ ಸದ್ವೃತ್ತಿಯನ್ನು ತಿರಸ್ಕರಿಸುವ, ಪರಾಜಿತರಾದ ರಾಜರ ವಿಷಯದಲ್ಲಿ ಪರಂಪರಾಗತವಾದ ಸಂಪ್ರದಾಯಗಳನ್ನು ಅನುಷ್ಠಾನಗೊಳಿಸದ ಕ್ಷತ್ರಿಯನನ್ನು ಅವನ ಪ್ರಜೆಗಳೇ ತಿರಸ್ಕರಿಸುತ್ತಾರೆ.
37. ಯಾವ ರಾಜ್ಯವು ಕೋಶಸಮೃದ್ಧಿಯಾಗಿರುವುದೋ, ಧನ ಧಾನ್ಯಗಳಿಂದ ತುಂಬಿರುವುದೋ, ರಾಜನನ್ನು ಪ್ರೀತಿಸುವ ಹಿತಚಿಂತಕರಿಂದ ಕೂಡಿರುವುದೋ, ವೇತನಾದಿಗಳಿಂದ ಸಂತುಷ್ಟನಾದ ಅಮಾತ್ಯವರ್ಗದಿಂದ ಸುತ್ತುವರಿದಿರುವುದೋ, ಆ ದೇಶದ ರಾಜನು ದೃಢಮೂಲನೆನಿಸುತ್ತಾನೆ.
38. ಯಾವ ರಾಜನ ನಗರ ಮತ್ತು ಗ್ರಾಮಗಳಲ್ಲಿ ವಾಸಿಸುವ ಜನರು ಸಮಸ್ತಜೀವಿಗಳ ವಿಷಯದಲ್ಲಿ ದಯಾಪರರೂ, ಧನ-ಧಾನ್ಯಸಂಪನ್ನರೂ ಆಗಿರುವರೋ ಆ ರಾಜನು ದೃಢಮೂಲನೆನಿಸುತ್ತಾನೆ.
